ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 211

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಶುಕ್ರವಾರ: 31–07–2026


# ದೆಹಲಿಯಲ್ಲಿ ಹೈಕಮಾಂಡ್ ಬಾಗಿಲು ಕಾಯುತ್ತಿರುವ ಸರ್ಕಾರ, ರಾಜ್ಯದಲ್ಲಿ ಜನಾಕ್ರೋಶ




**ಬೆಂಗಳೂರು, ಜು.30–** ಸಚಿವ ಸಂಪುಟ ವಿಸ್ತರಣೆಯ ಪ್ರಕ್ರಿಯೆಗಳ ಭಾಗವಾಗಿ ರಾಜ್ಯ ಸರ್ಕಾರದ ಮುಖ್ಯಮಂತ್ರಿ, ಕಾಂಗ್ರೆಸ್ ಶಾಸಕರು ಸೇರಿದಂತೆ ಬಹುತೇಕ ಮಂದಿ ದೆಹಲಿಯಲ್ಲೆ ಠಿಕಾಣಿ ಹೂಡಿರುವುದರಿಂದ ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಕೇಳುವವರಿಲ್ಲದಂತಹ ವಾತಾವರಣ ನಿರ್ಮಾಣವಾಗಿದೆ.

ಜನರಿಗೆ ಮಳೆಯ ಚಿಂತೆಯಾದರೆ, ಶಾಸಕರಿಗೆ ಸಚಿವ ಸ್ಥಾನದ ಚಿಂತೆ, ಪ್ರಮುಖ ನಾಯಕರಿಗೆ ಕುರ್ಚಿಯ ಕಾಳಜಿ ಎಂಬಂತಾಗಿದೆ. ಆಡಳಿತ ನಡೆಸುವವರ ಧೋರಣೆ ವಿರುದ್ಧ ಜನಾಕ್ರೋಶಗಳು ಹೆಚ್ಚಾಗುತ್ತಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ದೆಹಲಿಯಲ್ಲೆ ಬೀಡು ಬಿಟ್ಟಿದ್ದಾರೆ. ಜೊತೆಗೆ ಕಾಂಗ್ರೆಸ್‌ನ 70ಕ್ಕೂ ಹೆಚ್ಚು ಮಂದಿ ಶಾಸಕರು ದೆಹಲಿಯಲ್ಲೆ ಉಳಿದುಕೊಂಡಿದ್ದಾರೆ.

ಹೀಗಾಗಿ ಬರ ಪೀಡಿತ ಪ್ರದೇಶಗಳಲ್ಲಿ ಜನಪ್ರತಿನಿಧಿಗಳ ಕೊರತೆ ಎದ್ದು ಕಾಣುತ್ತಿದೆ. ಜನ ಕುಡಿಯುವ ನೀರು, ಬೆಳೆ ಹಾನಿಯಂತಹ ಸಮಸ್ಯೆಗಳಿಂದ ಚಿಂತಿತರಾಗಿದ್ದಾರೆ. ಕೆಲವು ಭಾಗಗಳಲ್ಲಿ ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಹೆಚ್ಚಾಗುತ್ತಿದೆ.

ಉದ್ಯೊ?ಗ ಖಾತ್ರಿ ಯೋಜನೆಯಡಿ ಸ್ಥಳೀಯವಾಗಿ ಉದ್ಯೊಗ ಸೃಷ್ಟಿಸಲು ಕ್ರಿಯಾ ಯೋಜನೆಗಳಿಗೆ ಶಾಸಕರ ಅನುಮೋದನೆ ಅಗತ್ಯ ಇದೆ ಮತ್ತು ಬರ ನಿರ್ವಹಣೆಗಾಗಿ ಬಿಡುಗಡೆ ಮಾಡಲಾಗುವ ಹಣದ ಬಳಕೆಯ ಮೇಲುಸ್ತುವಾರಿಗೂ ಶಾಸಕರ ಉಪಸ್ಥಿತಿ ಅತ್ಯಂತ ಜರೂರಿನ ವಿಷಯ. ಆದರೆ ಆಡಳಿತ ಪಕ್ಷದ ಸುಮಾರು 70ಕ್ಕೂ ಹೆಚ್ಚು ಶಾಸಕರು ದೆಹಲಿಯಲ್ಲಿ ಬೀಡು ಬಿಟ್ಟಿರುವುದರಿಂದ ಬರ ನಿರ್ವಹಣೆ ಕೆಲಸಗಳಿಗೆ ಗರ ಬಡಿದಂತಾಗಿದೆ. ಕೆಲ ಸಚಿವರು ಮತ್ತು ಮುಖ್ಯಮಂತ್ರಿಯವರು ದೆಹಲಿಯಲ್ಲೆ ಉಳಿದಿದ್ದು, ಬರ ನಿರ್ವಹಣೆಗಾಗಿ ಕೇಂದ್ರದಿಂದ ಹೆಚ್ಚಿನ ಅನುದಾನ ಪಡೆಯಲು ಪ್ರಯತ್ನಿಸಲಾಗುತ್ತಿದೆ ಎಂಬ ಸಮರ್ಥನೆ ನೀಡಲಾಗುತ್ತಿದೆ. ಆದರೆ ಸಂಸತ್ ಅಧಿವೇಶನ ನಡೆಯುತ್ತಿರುವುದರಿಂದ ಎಲ್ಲಾ ಸಚಿವರು ಅದರ ಕಾರ್ಯದೊತ್ತಡದಲ್ಲಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಹಾಗೂ ಸಚಿವರ ಭೇಟಿಗೆ ಸಮಯ ನೀಡುತ್ತಿಲ್ಲ ಎನ್ನಲಾಗಿದೆ.

ರಾಜ್ಯದಿಂದ ತೆರಳಿರುವವರು ದೆಹಲಿಯಲ್ಲಿ ಬೀಡು ಬಿಟ್ಟಿರುವುದು ಸಂಪುಟ ವಿಸ್ತರಣೆಯ ಕುರಿತು ಚರ್ಚಿಸುವ ಸಲುವಾಗಿ ಎಂದು ಎಲ್ಲರಿಗೂ ಗೊತ್ತಿರುವ ಸತ್ಯ. ಕಾಂಗ್ರೆಸ್ ಹೈಕಮಾಂಡ್ ನಾಯಕರು ನೀಟ್ ವಿಚಾರವಾಗಿ ಹೆಚ್ಚು ಗಮನ ಹರಿಸಿದ್ದು, ಸಂಪುಟ ವಿಸ್ತರಣೆಯ ಚರ್ಚೆಯನ್ನು ಅಲಕ್ಷಿಸಿದ್ದಾರೆ.

ರಾಜ್ಯದ ಮುಖ್ಯಮಂತ್ರಿ 4 ದಿನಗಳಿಂದ ಎಲ್ಲಾ ಕೆಲಸ ಕಾರ್ಯ ಬಿಟ್ಟು ಕಾದು ಕುಳಿತಿದ್ದರೂ, ಅವರ ಜೊತೆ ಅಗತ್ಯ ಚರ್ಚೆ ನಡೆಸಿ ವಿಷಯ ಇತ್ಯರ್ಥಗೊಳಿಸುವ ಬದಲಾಗಿ ಉದಾಸೀನತೆ ತೋರಿಸುತ್ತಿರುವ ಕಾಂಗ್ರೆಸ್ ಹೈಕಮಾಂಡ್‌ನ ಧೋರಣೆ ರಾಜ್ಯಕ್ಕಾದ ಅವಮಾನವೆಂಬ ವ್ಯಾಖ್ಯಾನಗಳು ನಡೆಯುತ್ತಿವೆ. ಈ ವಿಚಾರವಾಗಿ ವಿರೋಧ ಪಕ್ಷಗಳ ನಾಯಕರು ಆಕ್ಷೇಪ ಎತ್ತಿದ್ದು ಜನ ಬೀದಿಗಿಳಿಯುವ ಸಾಧ್ಯತೆ ಇದೆ.

## ಜನರಿಗೆ ಮಳೆ ಚಿಂತೆ



## ಶಾಸಕರಿಗೆ ಸಚಿವ ಸ್ಥಾನ ಚಿಂತೆ




## ಪ್ರಮುಖ ಅಂಶಗಳು

–70ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ದೆಹಲಿಯಲ್ಲಿ ಬೀಡು

–ಬರ ನಿರ್ವಹಣೆ ಕಾರ್ಯಗಳಿಗೆ ವೇಗ ಕುಂಠಿತ ಎಂಬ ಆರೋಪ

–ಕುಡಿಯುವ ನೀರು, ಬೆಳೆ ಹಾನಿಯಿಂದ ರೈತರ ಸಂಕಷ್ಟ

–ಉದ್ಯೋಗಕ್ಕಾಗಿ ನಗರಗಳತ್ತ ಹೆಚ್ಚಿದ ವಲಸೆ

–ಸ್ಥಳೀಯ ಆಡಳಿತದ ಮೇಲೆ ಹೆಚ್ಚಿದ ಒತ್ತಡ

## ಬರ ನಿರ್ವಹಣೆಗೆ ಅಗತ್ಯವೇನು?

–ಕುಡಿಯುವ ನೀರಿನ ತುರ್ತು ವ್ಯವಸ್ಥೆ

–ರೈತರಿಗೆ ಬೆಳೆ ಪರಿಹಾರ

–ಉದ್ಯೋಗ ಖಾತ್ರಿ ಯೋಜನೆಗೆ ವೇಗ

–ಬರಪೀಡಿತ ಜಿಲ್ಲೆಗಳ ನಿರಂತರ ಮೇಲ್ವಿಚಾರಣೆ

–ಕೇಂದ್ರದಿಂದ ಹೆಚ್ಚಿನ ಅನುದಾನ

## ಅನಕ್ಷರತೆ–ಬಡತನದಿಂದ ಮಾನವ ಕಳ್ಳಸಾಗಣೆ ಹೆಚ್ಚಳ!

## ಜಾಗೃತಿ ಮತ್ತು ಕಾನೂನು ಅರಿವಿನಿಂದ ಮಾತ್ರ ತಡೆ ಸಾಧ್ಯ: ನ್ಯಾಯಾಧೀಶ ಆನಂದ ಹೆಚ್. ಕೊಣ್ಣೂರು




ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಕೋನಾಪುರಪೇಟೆ ಸರಕಾರಿ ಪ್ರೌಢಶಾಲೆಯ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಮಾನವ ಕಳ್ಳ ಸಾಗಣೆ ವಿರೋಧಿದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಸಿವಿಲ್ ನ್ಯಾಯಾಧೀಶರಾದ ಆನಂದ ಹೆಚ್.ಕೊಣ್ಣೂರು ಮಾತನಾಡಿ. ದೇಶದಲ್ಲಿನ ಆನಕ್ಷರತೆ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವುದು ಮಾನವ ಕಳ್ಳಸಾಗಣಿಕೆ ನಡೆಯುವುದಕ್ಕೆ ಮುಖ್ಯಕಾರಣವಾಗಿದೆ ಕೆಲವರು ಬಡತನದಲ್ಲಿರುವವರಿಗೆ ಆಸೆ ,ಆಮೀಷಗಳನ್ನು ತೋರಿಸಿ ಅಪ್ರಾಪ್ತ ಬಾಲಕಿಯರನ್ನು,ಮಹಿಳೆಯರನ್ನು ಬೇರೆ ರಾಜ್ಯಗಳಿಗೆ ಬಾಲ್ಯವಿವಾಹದ ಹೆಸರಿನಲ್ಲಿ ಕಳ್ಳಸಾಗಣೆ ಮಾಡಿ ಅವರನ್ನು ನಂತರ ವೇಶ್ಯಾವಾಟಿಕೆಗೆ ,ಬಿಕ್ಷಾಟನೆಗೆ,ಜೀತಪದ್ದತಿಗೆ, ಸಮಾಜಘಾತುಕ ಚಟುವಟಿಕೆಗಳಿಗೆ, ಅಪರಾಧಿ ಕೃತ್ಯಗಳಿಗೆ,ಅಂಗಾಂಗಳ ಕಳ್ಳಸಾಗಣಿಕೆಗೆ ಬಳಸಿಕೊಂಡು ಹಣ ಮಾಡುತ್ತಾರೆ. ಅದ್ದರಿಂದ ವಿದ್ಯಾರ್ಥಿಗಳು ಮಾನವ ಕಳ್ಳಸಾಗಣಿಕೆ ಕುರಿತು ಜಾಗ್ರತೆವಹಿಸಬೇಕು ಹಾಗೂ ಪಾಲಕರಲ್ಲಿ ಕೂಡ ಜಾಗೃತಿ ಮೂಡಿಸಬೇಕು. ತಾಲೂಕು ಮಟ್ಟದಲ್ಲಿನ ನ್ಯಾಯಾಲಯಗಳಲ್ಲಿ ಮಹಿಳೆಯರಿಗೆ,ಮಕ್ಕಳಿಗೆ, ಆರ್ಥಿಕವಾಗಿ ದೃಬಲರಾಗಿರುವವರಿಗೆ, ಪ,ಜಾತಿಒ,ಪ.ಗಂಡ ಸಮುದಾಯದವರಿಗೆ ತಮ್ಮ ಮೇಲಿನ ಅರೋಪಗಳನ್ನು ನ್ಯಾಯಾಲಯದಲ್ಲಿ ಎದುರಿಸುವುದಕ್ಕೆ ತಾಲೂಕು ಕಾನೂನು ಸೇವಾ ಸಮಿತಿಯು ಮೂಲಕ ಉಚಿತವಾಗಿ ವಕೀಲರನ್ನು ನೇಮಿಸಿಕೊಡಲಾಗುವುದು ಹಾಗೂ ಉಚಿತ ಕಾನೂನು ಅರಿವು ಮತ್ತು ನೆರವು ನೀಡಲಾಗುವುದು ಪ್ರತಿ ಯೊಬ್ಬ ವಿದ್ಯಾರ್ಥಿ ಕೂಡ ಕಾನೂನುಗಳ ಬಗ್ಗೆ ತಿಳಿದುಕೊಳ್ಳುವುದು ಇಂದಿನ ದಿನಗಳಲ್ಲಿ ಅಗತ್ಯವಾಗಿದೆ ಎಂದು ತಿಳಿಸಿದರು.

ಶ್ರೀದೇವಿ ಶರಣ ಪಾಟೀಲ್ ಮಾತನಾಡಿ ವಿಶ್ವದಲ್ಲಿ ಭಾರತ ದೇಶವು ಮಾನ ಕಳ್ಳಸಾಗಣೆಯಲ್ಲಿ 3 ನೇ ಸ್ಥಾನದಲ್ಲಿದೆ ದೇಶದಲ್ಲಿನ ಆನಕ್ಷರತೆ,ಬಡತನ,ನಿರುದ್ಯೋಗದಿಂದಾಗಿ ಮದುವೆ,ಉದ್ಯೋಗದ ಆಸೆಯನ್ನು ತೋರಿಸಿ ಮಹಿಳೆಯರನ್ನು ಮಕ್ಕಳನ್ನು ಸುಲಾಭವಾಗಿ ಬಳಸಿಕೊಂಡು ಶೋಷಣೆ ಮಾಢಲಾಗುತ್ತದೆ. ಮಾನವ ಕಳ್ಳಸಾಗಣಿಕೆಯಲ್ಲಿ ವ್ಯಕ್ತಿಗಳು ಸೇರಿದಂತೆ ಸಂಘಟನೆಗಳು ಕೂಡ ಸೇರಿಕೊಂಡಿದು ಇಂತಹ ಘಟನೆಗಳು ನಡೆದಾಗ ಪೊಲೀಸ್ ಸಹಾಯವಾಣಿ,ಮಕ್ಕಳ ಸಹಾಯವಾಣಿ ಸಂಖ್ಯೆಗೆ ದೂರವಾಣಿ ಮೂಲಕ ಮಾಹಿತಿ ನೀಡಿ ರಕ್ಷಣೆಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ಸರಕಾರಿ ಅಭಿಯೋಜಕರಾದ ಅರ್ಚನಾ ಯಾದವ್, ಪಿ.ಎಸ್.ಐ. ಶರಣಪ್ಪ, ಶಾಲೆಯ ಮುಖ್ಯಗುರುಗಳಾದ ವಿರೂಪಾಕ್ಷಪ್ಪ, ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ರವಿಕುಮಾರ ಪಾಟೀಲ್, ಉಪಾಧ್ಯಕ್ಷರಾದ ವಿಶ್ವನಾಥರಾಯಪ್ಪ, ಶಿವಪ್ಪ ಸುಂಕನೂರ್, ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಹಿರೇಬಾದರದಿನ್ನಿ, ಸ್ಟೇಲ್ಲಾ ಶಾರ್ಲೇಟ್, ಚಂದ್ರಕಾಲ, ಗೂಗಲ್ ನಾಗರಾಜ, ಶಿಕ್ಷಣ ಇಲಾಖೆಯ ದೈಹಿಕ ಪರೀವಿಕ್ಷಕರಾದ ಮಾರುತಿ, ಇ.ಸಿ.ಓ. ಮಹೇಶಕುಮಾರ, ಶಾಲಾ ಸುಧಾರಣಾ ಸಮಿತಿಯ ಉಪಾಧ್ಯಕ್ಷರಾದ ಬಸಮ್ಮ, ಹಿರಿಯ ವಕೀಲರಾದ ಚನ್ನಬಸವನಾಯಕ,ಶಕೀಲ್ ಬಾದಯಿ,ಶ್ರೀನಿವಾಸ ನಂದಿಹಾಳ್,ಜಗದೀಶ ಬಾಗಲವಾಡ,ದತ್ತಾತ್ರೇಯ ಹಿರೇಕೋಟ್ನೆಕಲ್,ಶಶಿಕಾಂತಯ್ಯಸ್ವಾಮಿ, ಅಮೃತಾ ವಕೀಲರು ಹಾಗೂ ಶಾಲೆಯ ಶಿಕ್ಷಕರಾದ ನವೀನ್ ಕುಮಾರ,ದೈಹಿಕ ಶಿಕ್ಷಕರಾದ ಮೌನೇಶ ಪೋತ್ನಾಳ್ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

## ಸಿರವಾರ: ಖಬರಸ್ತಾನ್ ಜಾಗದಲ್ಲಿ ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ ಹೈಕೋರ್ಟ್ ತಡೆ

ಧೈರ್ಯದ ದಾರಿ



**ಸಿರವಾರ:** ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿರುವ ವಕ್ಸ್ ಇಲಾಖೆಗೆ ಸೇರಿದ ಖಬರಸ್ತಾನ್ (ಸ್ಮಶಾನ) ಜಾಗದಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸುತ್ತಿರುವ ವಾಣಿಜ್ಯ ಮಳಿಗೆಗಳ ಕಾಮಗಾರಿಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಚರಂಡಿ ಹಾಗೂ ಪಾದಚಾರಿ ಮಾರ್ಗವನ್ನು ಬಿಡದೆ, ಕಾನೂನುಬಾಹಿರವಾಗಿ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಪ್ರಶ್ನಿಸಿ 'ಹಳೆ ಈದ್ಗಾ ಸುನ್ನಿ ಸಂಘ' ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ಅಂಗೀಕರಿಸಿ ಈ ತಡೆಯಾಜ್ಞೆ ನೀಡಿದೆ.

ಮಳಿಗೆಗಳ ನಿರ್ಮಾಣ ಕಾರ್ಯಕ್ಕೆ ಪಟ್ಟಣ ಪಂಚಾಯಿತಿಯಿಂದ ಯಾವುದೇ ಅನುಮತಿ ಪಡೆದಿಲ್ಲ ಹಾಗೂ ವಕ್ಸ್ ಇಲಾಖೆಯ ನಿಯಮಗಳನ್ನೂ ಉಲ್ಲಂಘಿಸಿ ತರಾತುರಿಯಲ್ಲಿ ಕಾಮಗಾರಿ ನಡೆಸಲಾಗಿದೆ. ಪಟ್ಟಣ ಪಂಚಾಯಿತಿ ಅಧಿಕಾರಿಗಳು ಕಾಮಗಾರಿ ಸ್ಥಗಿತಗೊಳಿಸುವಂತೆ ನೋಟಿಸ್ ನೀಡಿದ್ದರೂ, ಅದನ್ನು ಲೆಕ್ಕಿಸದೆ ಮಳಿಗೆಗಳ ನಿರ್ಮಾಣ ಮುಂದುವರಿಸಲಾಗಿತ್ತು.

ನ್ಯಾಯಾಲಯದ ಆದೇಶದಂತೆ ಅಕ್ರಮ ನಿರ್ಮಾಣಗಳನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕೆಂದು ಮುಸ್ಲಿಂ ಸಮುದಾಯದ ಮುಖಂಡರಾದ ಎಂ.ಡಿ. ಹುಸೇನ್, ಬಷೀರ್ ಸಾಬ್, ಹಬೀಬ್ ಬಡೇಗರ್, ಬಾಬಲಿ ಸಾಬ್ ಮತ್ತಿತರರು ತಹಶೀಲ್ದಾರ್ ಅಶೋಕ್ ಪವಾರ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

## ಚನ್ನಮ್ಮ ದೇವೇಗೌಡ ಅವರ ಉತ್ತರ ಕ್ರಿಯಾದಿ ಕಾರ್ಯಕ್ರಮದಲ್ಲಿ ರಾಜಾ ವೆಂಕಟಪ್ಪ ನಾಯಕ ದೊರೆ ಭಾಗಿ

ಧೈರ್ಯದ ದಾರಿ



**ಮಾನ್ವಿ:** ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ದೊರೆ ಅವರು ಇಂದು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಮಾವಿನಕೆರೆಯಲ್ಲಿ ನಡೆದ ದಿವಂಗತ ಶ್ರೀಮತಿ ಚನ್ನಮ್ಮ ಎಚ್.ಡಿ. ದೇವೇಗೌಡ ಅವರ 11ನೇ ದಿನದ ಉತ್ತರ ಕ್ರಿಯಾದಿ ಕಾರ್ಯಕ್ರಮದಲ್ಲಿ ಭಾಗವಹಿಸಿ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಾಜಾ ವೆಂಕಟಪ್ಪ ನಾಯಕ ದೊರೆ ಮಾತನಾಡಿ, ದಿವಂಗತ ಚನ್ನಮ್ಮ ದೇವೇಗೌಡ ಅವರ ಸರಳತೆ, ಕುಟುಂಬ ಮೌಲ್ಯಗಳು ಹಾಗೂ ಸಮಾಜಮುಖಿ ಜೀವನವನ್ನು ಸ್ಮರಿಸಿದರು. ಅವರ ಅಗಲಿಕೆ ಕುಟುಂಬದವರಿಗೆ ಮಾತ್ರವಲ್ಲ, ಅವರನ್ನು ಅರಿತ ಎಲ್ಲರಿಗೂ ತುಂಬಲಾರದ ನಷ್ಟವಾಗಿದೆ ಎಂದು ಸಂತಾಪ ಸೂಚಿಸಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಪಕ್ಷದ ಸಿರವಾರ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಬಲ್ಲಟಗಿ, ತಾಲೂಕು ವಕ್ತಾರ ನಾಗರಾಜ್ ಭೋಗಾವತಿ, ಮಾನ್ವಿ ನಗರ ಘಟಕದ ಜೆಡಿಎಸ್ ಅಧ್ಯಕ್ಷ ಎಚ್. ಮೌನೇಶ್ ಗೌಡ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ರಾಜ್ಯದಲ್ಲಿ 27,700ಕ್ಕೂ ಹೆಚ್ಚು ಸೌರ ಪಂಪ್‌ಗಳು ಕಾರ್ಯಾರಂಭ । 142 ಮೆಗಾವ್ಯಾಟ್ ಗ್ರಿಡ್ ವಿದ್ಯುತ್ ಬೇಡಿಕೆ ಕಡಿತ । ವರ್ಷಕ್ಕೆ 347 ಕೋಟಿ ಉಳಿತಾಯದ ನಿರೀಕ್ಷೆ**

# ಸೌರ ಕೃಷಿ ಪಂಪ್‌ಸೆಟ್‌ಗಳಿಂದ ವಿದ್ಯುತ್ ಬೇಡಿಕೆ ಇಳಿಕೆ!

**ಬೆಂಗಳೂರು, ಜು.30:** ರಾಜ್ಯ ಸರ್ಕಾರ ಕೃಷಿ ಕ್ಷೇತ್ರದಲ್ಲಿ ಸೌರ ವಿದ್ಯುತ್ ಬಳಕೆಗೆ ಹೆಚ್ಚಿನ ಉತ್ತೇಜನ ನೀಡುತ್ತಿರುವ ಹಿನ್ನೆಲೆಯಲ್ಲಿ, ಕಳೆದ ಏಳು ತಿಂಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೈತರು ಸೌರ ಕೃಷಿ ಪಂಪ್‌ಸೆಟ್‌ಗಳ ಅಳವಡಿಕೆಗೆ ಅರ್ಜಿ ಸಲ್ಲಿಸಿದ್ದಾರೆ. ಪ್ರಸ್ತುತ ರಾಜ್ಯದಲ್ಲಿ 27,700ಕ್ಕೂ ಹೆಚ್ಚು ಸೌರ ಕೃಷಿ ಪಂಪ್‌ಸೆಟ್‌ಗಳು ಕಾರ್ಯಾರಂಭ ಮಾಡಿದ್ದು, ಅವುಗಳ ಬಳಕೆಯಿಂದ 142 ಮೆಗಾವ್ಯಾಟ್ ಗ್ರಿಡ್ ವಿದ್ಯುತ್ ಬೇಡಿಕೆ ಕಡಿಮೆಯಾಗಿದೆ. ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ವಿಶೇಷ ಆಸಕ್ತಿ, ನಿರಂತರ ಮೇಲ್ವಿಚಾರಣೆ ಹಾಗೂ ಆಡಳಿತಾತ್ಮಕ ಹಸ್ತಕ್ಷೇಪದಿಂದ ಆರಂಭಿಕ ಹಂತದಲ್ಲಿ ನಿಧಾನಗತಿಯಲ್ಲಿ ಸಾಗುತ್ತಿದ್ದ ಯೋಜನೆಗೆ ಹೊಸ ಚೈತನ್ಯ ದೊರೆತಿದೆ ಎಂದು ಇಂಧನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಇಂಧನ ಇಲಾಖೆ, ಎಸ್ಕಾಂಗಳು, ಅನುಷ್ಠಾನ ಸಂಸ್ಥೆಗಳು ಹಾಗೂ ಪೂರೈಕೆದಾರರ ಸಮನ್ವಯದಿಂದ ಯೋಜನೆಯಲ್ಲಿದ್ದ ತಾಂತ್ರಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸಿದ ಬಳಿಕ ರೈತರ ಸ್ಪಂದನೆ ಗಮನಾರ್ಹವಾಗಿ ಹೆಚ್ಚಿದೆ.

ರಾಜ್ಯ ಸರ್ಕಾರ ಸೌರ ಕೃಷಿ ಪಂಪ್‌ಸೆಟ್ ಅಳವಡಿಸಿಕೊಳ್ಳುವ ರೈತರಿಗೆ ಶೇ.50ರಷ್ಟು ಸಹಾಯಧನ ನೀಡುತ್ತಿದ್ದು, ಇದರಿಂದ ಕಡಿಮೆ ವೆಚ್ಚದಲ್ಲಿ ಸೌರ ವಿದ್ಯುತ್ ಬಳಸುವ ಅವಕಾಶ ದೊರಕಿದೆ. ಪರಿಣಾಮವಾಗಿ ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆಯೂ ಕಡಿಮೆಯಾಗುತ್ತಿದೆ. ಕುಸುಮ್–ಬಿ ಯೋಜನೆ ಅಡಿಯಲ್ಲಿ ಅಳವಡಿಸಿರುವ ಸೌರ ಪಂಪ್‌ಸೆಟ್‌ಗಳಿಂದ ರೈತರಿಗೆ ರಾತ್ರಿ ವೇಳೆ ನೀರಾವರಿಗಾಗಿ ಹೊಲಗಳಿಗೆ ತೆರಳುವ ತೊಂದರೆ ತಪ್ಪಿದ್ದು, ಹಗಲಿನ ವೇಳೆಯಲ್ಲೇ ವಿಶ್ವಾಸಾರ್ಹ ವಿದ್ಯುತ್ ದೊರೆಯುತ್ತಿದೆ. ಇದರಿಂದ ರೈತರ ಸುರಕ್ಷತೆ, ಅನುಕೂಲತೆ ಹಾಗೂ ಉತ್ಪಾದಕತೆ ಹೆಚ್ಚುತ್ತಿದೆ.




### ಯೋಜನೆಯಿಂದ ಆಗುವ ಲಾಭ

- ವರ್ಷಕ್ಕೆ ಸುಮಾರು 236 ಮಿಲಿಯನ್ ಯೂನಿಟ್ ವಿದ್ಯುತ್ ಖರೀದಿಯನ್ನು ತಪ್ಪಿಸುವ ಮೂಲಕ ಎಸ್ಕಾಂಗಳಿಗೆ 144 ಕೋಟಿ ಉಳಿತಾಯ
- ಕೃಷಿ ವಿದ್ಯುತ್ ಸಹಾಯಧನದಲ್ಲಿ ಸರ್ಕಾರಕ್ಕೆ 203 ಕೋಟಿ ಉಳಿತಾಯ ಆಗಲಿದೆ.

### ಸೌರ ಕೃಷಿ ಯೋಜನೆ ಒಂದೇ ನೋಟದಲ್ಲಿ

–ಒಂದು ಲಕ್ಷಕ್ಕೂ ಹೆಚ್ಚು ರೈತರ ಅರ್ಜಿ
–27,700+ ಸೌರ ಕೃಷಿ ಪಂಪ್‌ಸೆಟ್ ಕಾರ್ಯಾರಂಭ
–142 ಮೆಗಾವ್ಯಾಟ್ ಗ್ರಿಡ್ ವಿದ್ಯುತ್ ಬೇಡಿಕೆ ಇಳಿಕೆ
–40 ಸಾವಿರ ಪಂಪ್‌ಸೆಟ್ ಗುರಿಯತ್ತ ವೇಗದ ಮುನ್ನಡೆ
–ರೈತರಿಗೆ ಶೇ.50ರಷ್ಟು ಸರ್ಕಾರಿ ಸಹಾಯಧನ
–144 ಕೋಟಿ ವಿದ್ಯುತ್ ಖರೀದಿ ವೆಚ್ಚ ಉಳಿತಾಯ
–203 ಕೋಟಿ ವಿದ್ಯುತ್ ಸಹಾಯಧನ ಉಳಿತಾಯ

### ಸಚಿವ ಕೆ.ಜೆ. ಜಾರ್ಜ್ ಹೇಳಿದ್ದೇನು?

"ಪ್ರತಿಯೊಂದು ಸೌರ ಕೃಷಿ ಪಂಪ್‌ಸೆಟ್ ಕರ್ನಾಟಕದ ಭವಿಷ್ಯಕ್ಕೆ ಮಾಡುವ ಶಾಶ್ವತ ಹೂಡಿಕೆಯಾಗಿದೆ. ಇದು ವಿದ್ಯುತ್ ಖರೀದಿ ವೆಚ್ಚವನ್ನು ಕಡಿಮೆ ಮಾಡಿ, ಇಂಧನ ಭದ್ರತೆಯನ್ನು ಬಲಪಡಿಸುವುದರ ಜೊತೆಗೆ ರೈತರ ಜೀವನಮಟ್ಟವನ್ನು ಸುಧಾರಿಸುತ್ತದೆ."



## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ರಾಯಚೂರು ಜುಲೈ 30:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ರಾಯಚೂರು ಜಿಲ್ಲೆಯಲ್ಲಿ 08 ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಗಳಲ್ಲಿ ಖಾಲಿ ಇರುವ 30 ಅಂಗನವಾಡಿ ಕಾರ್ಯಕರ್ತೆ ಮತ್ತು 157 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಚಿಸುವವರು ಸಂಬಂಧ ಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಚೇರಿಗೆ ಆಗಸ್ಟ್ 28 ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ರಾಯಚೂರು, ಗಿಲ್ಲೇಸೂಗೂರು, ಮಾನವಿ, ಸಿರವಾರ, ಸಿಂಧನೂರು, ತುರವಿಹಾಳ, ಲಿಂಗಸೂಗೂರು ಹಾಗೂ ದೇವದುರ್ಗ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂತರ್ ಇಲಾಖೆಯ ಸಮನ್ವಯ ಸಭೆ ಇಂದು

**ರಾಯಚೂರು ಜುಲೈ 30:** ರಾಯಚೂರು ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಇನ್ನು ಹೆಚ್ಚಿನ ಮಳೆಯಾಗುವ ಸಂಬವವಿರುವುದರಿಂದ ಹಾಗೂ ವಾತಾವರಣ ಬದಲಾವಣೆಯ ಪರಿಣಾಮ ರೋಗಗಳು ಹೆಚ್ಚಾಗುವ ಸಂಭವವಿದ್ದು, ಈ ರೋಗಗಳ ಬಗ್ಗೆ ಮುಂಜಾಗ್ರತ ಹಾಗೂ ನಿಯಂತ್ರಣ ಕ್ರಮಗಳ ಅನುಷ್ಠಾನಕ್ಕಾಗಿ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜುಲೈ 31ರ ಸಂಜೆ 5ಗಂಟೆಗೆ ಅಂತರ್ ಇಲಾಖೆಯ ಸಮನ್ವಯ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ತಪ್ಪದೇ ಭಾಗವಹಿಸಿ ಸಲಹೆ ಸೂಚನೆ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ನಂದಿತಾ ಎಮ್.ಎನ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.ದೇವರಾಜ ಅರಸು ಜನ್ಮ ದಿನಾಚರಣೆ: ಇಂದು ಪೂರ್ವಭಾವಿ ಸಭೆ

**ರಾಯಚೂರು ಜುಲೈ 30:** ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು 111ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜುಲೈ 31ರ ಬೆಳಿಗ್ಗೆ 11ಗಂಟೆಗೆ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಪೂರ್ವಭಾವಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ತಪ್ಪದೇ ಭಾಗವಹಿಸಿ ತಮ್ಮ ಸಲಹೆ–ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳ್ಳಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಕಲ್ಮಠ ಪ್ರಾಥಮಿಕ ಶಾಲೆಯಲ್ಲಿ ನೂತನ ಶಾಲಾ ಸಂಸತ್ ಸದಸ್ಯರ ಪ್ರಮಾಣ ವಚನ**

## ನಾಯಕತ್ವ ಎಂದರೆ ಕೇವಲ ಅಧಿಕಾರವಲ್ಲ, ಜವಾಬ್ದಾರಿಯೂ ಹೌದು: ಮಲ್ಲಿಕಾರ್ಜುನ ಕೋನಾಪುರಪೇಟೆ



ಧೈರ್ಯದ ದಾರಿ

**ಮಾನ್ವಿ, ಜು.30:** ಪಟ್ಟಣದ ಕಲ್ಮಠ ಪ್ರಾಥಮಿಕ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ನೂತನ ಶಾಲಾ ಸಂಸತ್ ಸದಸ್ಯರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮವು ಗುರುವಾರ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕಲ್ಮಠ ಶಾಲೆಯ ಹಳೆಯ ವಿದ್ಯಾರ್ಥಿ ಮಲ್ಲಿಕಾರ್ಜುನ ಕೋನಾಪುರಪೇಟೆ, "ನಾಯಕತ್ವ ಎಂದರೆ ಕೇವಲ ಅಧಿಕಾರವಲ್ಲ; ಅದು ಜವಾಬ್ದಾರಿ. ವಿದ್ಯಾರ್ಥಿಗಳು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬೆಳೆಯಬೇಕು" ಎಂದು ಹೇಳಿದರು.

ತಾವು ಇದೇ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭವನ್ನು ಸ್ಮರಿಸಿದ ಅವರು, ಸಂಸ್ಥಾಪಕ ಅಧ್ಯಕ್ಷರಾದ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಪ್ರತಿ ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಉತ್ತಮ ಶಿಕ್ಷಣ ಪಡೆದು ಸಮಾಜದಲ್ಲಿ ಉತ್ತಮ ಹೆಸರು ಗಳಿಸುವಂತೆ ಪ್ರೇರೇಪಿಸುತ್ತಿದ್ದರು ಎಂದು ಹೇಳಿದರು.

ಈ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳಿಗೂ ಆದ್ಯತೆ ನೀಡಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲ್ಮಠ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಸಂಗಯ್ಯ ಸ್ವಾಮಿ ಮಾತನಾಡಿ, ನೂತನ ಶಾಲಾ ಸಂಸತ್ ಸದಸ್ಯರು ಸಹಪಾಠಿಗಳೊಂದಿಗೆ ಸಹೋದರತ್ವದ ಮನೋಭಾವದಿಂದ ನಡೆದುಕೊಳ್ಳಬೇಕು. ಶಾಲಾ ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ಶಿಸ್ತು ಪಾಲನೆಯ ಮೂಲಕ ಶಾಲೆಯ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ಕರೆ ನೀಡಿದರು.

ಪ್ರೌಢಶಾಲೆಯ ಪ್ರಭಾರಿ ಮುಖ್ಯಗುರು ಬ್ರಮರಾಂಬಾದೇವಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಮಠ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ ಕಮತರ ವಹಿಸಿದ್ದರು. ಶಾಲಾ ಸಂಸತ್ ಚುನಾವಣಾಧಿಕಾರಿಯಾದ ಶಿಕ್ಷಕಿ ಜಯಶ್ರೀ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು.


ಈ ಸಂದರ್ಭದಲ್ಲಿ ಶಿಕ್ಷಕರಾದ ಕೇಮ್ಯನಾಯ್ಕ, ರವಿ ಹುಲಿಯಾಪುರ, ರೂಪ, ಮಹಾಂತಮ್ಮ ಸೇರಿದಂತೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ರಿಜ್ವಾನ್ ನಿರೂಪಿಸಿದರು. ಈರಮ್ಮ (6ನೇ ತರಗತಿ) ಸ್ವಾಗತಿಸಿದರು ಹಾಗೂ ಪವಿತ್ರ ವಂದಿಸಿದರು.

## ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಗುರುಪೂರ್ಣಿಮ ಮಹೋತ್ಸಾವ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ನಡೆದ ಗುರುಪೂರ್ಣಿಮ ಮಹೋತ್ಸಾವ ಕಾರ್ಯಕ್ರಮದಲ್ಲಿ ಪರಮಪೂಜ್ಯ ಭಕ್ತರಾಜ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಗುರುಪೂರ್ಣಿಮ ಮಹೋತ್ಸಾವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಪ್ರಥಮೋಪಚಾರ ವಿಭಾಗದ ವಕ್ತಾರರಾದ ಡಾ.ರೂಪಾ ಫಡ್ನವಿಸ್ ರಾಯಚೂರು ಉಪನ್ಯಾಸ ನೀಡಿ ನಮ್ಮ ದೇಶದಲ್ಲಿ ರಾಮರಾಜ್ಯ,ಈಶ್ವರಿಯ ರಾಜ್ಯವನ್ನು ಆಧ್ಯತ್ಮಿಕ ತತ್ವಗಳಿಂದ ಮಾತ್ರ ನಿರ್ಮಾಣ ಮಾಡುವುದಕ್ಕೆ ಸಾಧ್ಯ .ಅದಕ್ಕಾಗಿ ರಾಮನ ತತ್ವಗಳನ್ನು ,ಅದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕಾಗಿದೆ. ರಾಷ್ಟ್ರ ಮತ್ತು ಧರ್ಮದ ಆಚರಣೆಗಾಗಿ ಅವಶ್ಯವಾಗಿ ಸಮರ್ಪಿಸಿಕೊಳ್ಳಬೇಕಾಗಿದೆ. ಆಗ ಮಾತ್ರ ಭಕ್ತಿ ಮತ್ತು ಶಕ್ತಿಯ ಯೋಗ್ಯ ಸಮ್ಮಿಲನ ಸಾಧ್ಯವಾಗುತ್ತದೆ. ಗುರುದೇವ ಜಪ,ತ್ಯಾಗ,ಕುಲದೈವದ ಆರಾಧನೆ,ತನುವಿನಿಂದ ಧರ್ಮ ಪ್ರಸಾರಣೆ,ಮನಸ್ಸಿನಿಂದ ಭಗವಂತನ ನಾಮ ಜಪ, ಸತ್ಪಾತ್ರರಿಗೆ,ಸಂತರಿಗೆ,ಗುರುಗಳಿಗೆ, ನಾವು ನೀಡುವ ದಾನ ಅತ್ಯಂತ ಶ್ರೇಷ್ಠವಾಗುವುದಕ್ಕೆ ಸಾಧ್ಯ, ರಾಮರಾಜ್ಯಕ್ಕಾಗಿ ನಾವೇಲ್ಲರು ರಾಮರಕ್ಷ ಸ್ತೋತ್ರ,ಹನುಮನ್ ಚಾಲಿಸ್ ಪಠಣದಿಂದ ಮಾತ್ರ ಸನಾತನ ಧರ್ಮದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು.



ವ್ಯಾಸ ಪೀಠದ ಮೂಲಕ ವಿಜಯಲಕ್ಷ್ಮೀ ಚಿಂಚೋಳ್ಳಿ ವಿಶೇಷ ಉಪನ್ಯಾಸ ನೀಡಿದರು.

ಸನಾತನ ಹಿಂದೂಸಮಿತಿಯ ವತಿಯಿಂದ ಅಯುರ್ವೇಧ ಔಷಾಧಿಗಳು,ನಿತ್ಯ ದೇವತ ಅರ್ಚನೆಗೆ ಅಗತ್ಯವಿರುವ ಪೂಜಾ ಸಾಮಾಗ್ರಿಗಳು.ಸನಾತನ ಧರ್ಮದ ಕುರಿತು ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಯಿತು.

ಹಿಂದೂ ಜಾಗೃತಿ ಸಮಿತಿಯ ತಾಲೂಕು ಸಮಿತಿಯ ಸಮನ್ವಯಕರರಾದ ಮಾರುತಿನಾಯಕ, ದುರ್ಗಪ್ಪ, ರಾಜಶೇಖರ, ವಿನೋದಕುಮಾರ, ಲತಾಪತ್ತೇಪುರ್, ವಿನೋದ್ ಮುಳ್ಳುರು, ಕೃಷ್ಣ ವೇಣಿ, ಬಿ.ವಿ.ರೆಡ್ಡಿ ಸೇರಿದಂತೆ ಇನ್ನಿತರರು ಇದ್ದರು.

## ಆಗಸ್ಟ್ 4 ರವರೆಗೆ ದೇಶಾದ್ಯಂತ ಭಾರೀ ಮಳೆ

**ನವದೆಹಲಿ,ಜು.30**–ಇತ್ತೀಚಿನ ಹವಾಮಾನ ಮುನ್ಸೂಚನೆಯ ಪ್ರಕಾರ, ಜುಲೈ 30 ರಿಂದ ಆಗಸ್ಟ್ 4 ರವರೆಗೆ ದೇಶದ ಹಲವು ಭಾಗಗಳಲ್ಲಿ ಮಾನ್ಸೂನ್ ಮತ್ತಷ್ಟು ಚುರುಕುಗೊಳ್ಳಲಿದ್ದು, ಭಾರೀ ಮಳೆಯಾಗುವ ಎಚ್ಚರಿಕೆ ನೀಡಲಾಗಿದೆ. ಉತ್ತರ, ಪೂರ್ವ, ಪಶ್ಚಿಮ, ಮಧ್ಯ ಮತ್ತು ದಕ್ಷಿಣ ಭಾರತದ ಹಲವಾರು ರಾಜ್ಯಗಳಲ್ಲಿ ಈ ಅವಧಿಯಲ್ಲಿ ಬಿರುಗಾಳಿ, ಗುಡುಗು, ಸಿಡಿಲು ಹಾಗೂ ಭಾರೀ ಮಳೆಯಾಗುವ ಸಾಧ್ಯತೆಯಿದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹಳದಿ ಎಚ್ಚರಿಕೆಯನ್ನು ಘೋಷಿಸಲಾಗಿದ್ದು, ಮೋಡ ಕವಿದ ವಾತಾವರಣದೊಂದಿಗೆ ಆಗಸ್ಟ್ 4 ರವರೆಗೆ ಹಗುರದಿಂದ ಮಧ್ಯಮ ಹಾಗೂ ಕೆಲವು ಕಡೆ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಅಲ್ಲಿ ತಾಪಮಾನವು ಗರಿಷ್ಠ 33ಲಿಸಿಹಾಗೂ ಕನಿಷ್ಠ 25ಲಿಸಿ ಆಸುಪಾಸಿನಲ್ಲಿರಲಿದೆ.

ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಜಮ್ಮು–ಕಾಶ್ಮೀರದಂತಹ ಪರ್ವತ ಪ್ರದೇಶಗಳಲ್ಲಿಯೂ ಭಾರಿ ಮಳೆಯಾಗುವ ಎಚ್ಚರಿಕೆ ಇದ್ದು, ಭೂಕುಸಿತ, ರಸ್ತೆ ತಡೆ ಹಾಗೂ ನದಿ–ಹೊಳೆಗಳಲ್ಲಿ ನೀರಿನ ಮಟ್ಟ ಹಠಾತ್ ಏರಿಕೆಯಾಗುವ ಅಪಾಯವಿರುವುದರಿಂದ ಪ್ರಯಾಣಿಕರು ಹಾಗೂ ಸ್ಥಳೀಯರು ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ. ಇದಲ್ಲದೆ ಹರಿಯಾಣ, ಪಂಜಾಬ್, ಚಂಡೀಗಢ, ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲೂ ಮಳೆ ಆರ್ಭಟ ಮುಂದುವರಿಯಲಿದೆ. ಪೂರ್ವ ಮತ್ತು ಈಶಾನ್ಯ ಭಾರತದ ಬಿಹಾರ, ಜಾರ್ಖಂಡ್, ಒಡಿಶಾ, ಪಶ್ಚಿಮ ಬಂಗಾಳ, ಸಿಕ್ಕಿಂ, ಅಸ್ಸಾಂ, ಮೇಘಾಲಯ, ಅರುಣಾಚಲ ಪ್ರದೇಶ ಹಾಗೂ ತ್ರಿಪುರ ರಾಜ್ಯಗಳಲ್ಲೂ ಮುಂದಿನ ಕೆಲವು ದಿನಗಳು ಸಕ್ರಿಯ ಮಾನ್ಸೂನ್ ಮಳೆಯಾಗಲಿದೆ.

ಪಶ್ಚಿಮ ಹಾಗೂ ದಕ್ಷಿಣ ಭಾರತದ ಕೊಂಕಣ–ಗೋವಾ, ಗುಜರಾತ್, ಮಹಾರಾಷ್ಟ್ರ, ಕೇರಳ, ಕರಾವಳಿ ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರಪ್ರದೇಶಗಳಲ್ಲಿಯೂ ಉತ್ತಮ ಮಳೆಯಾಗುವ ಮುನ್ಸೂಚನೆ ಇದೆ. ಕೆಲವು ಪ್ರದೇಶಗಳಲ್ಲಿ ಗಂಟೆಗೆ 50 ರಿಂದ 60 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ. ಒಡಿಶಾ, ಪಶ್ಚಿಮ ಬಂಗಾಳ ಹಾಗೂ ಆಂಧ್ರಪ್ರದೇಶದ ಕರಾವಳಿ ಭಾಗಗಳಲ್ಲಿ ಅಪಾಯಕಾರಿ ಗಾಳಿ ಬೀಸುವ ಲಕ್ಷಣಗಳಿರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದೆಂದು ಹವಾಮಾನ ಇಲಾಖೆ ಖಡಕ್ ಸೂಚನೆ ನೀಡಿದೆ. ಜನಸಾಮಾನ್ಯರು ನೀರು ನಿಲ್ಲುವ ಪ್ರದೇಶಗಳಿಂದ ದೂರವಿರಲು, ಸಿಡಿಲಿನ ಸಮಯದಲ್ಲಿ ತೆರೆದ ಜಾಗದಲ್ಲಿ ನಿಲ್ಲದಿರಲು ಮತ್ತು ಅನಗತ್ಯ ಪ್ರಯಾಣವನ್ನು ತಪ್ಪಿಸಿ ಸ್ಥಳೀಯ ಆಡಳಿತದ ಜಾಗರೂಕತಾ ಮಾರ್ಗಸೂಚಿಗಳನ್ನು ಪಾಲಿಸಲು ಕೋರಲಾಗಿದೆ.

# ವಿಕಲಚೇತನರ ಆಯುಕ್ತರ ನೇಮಕಕ್ಕೆ ರಾಜ್ಯಗಳಿಗೆ ಸುಪ್ರೀಂ ಗಡುವು



**ಹೊಸದೆಹಲಿ,ಜು.30:** ವಿಕಲಚೇತನರ ಹಕ್ಕುಗಳ ಕಾಯ್ದೆ-2016 ರ ಅಡಿಯಲ್ಲಿ ರಾಜ್ಯ ವಿಕಲಚೇತನರ ಆಯುಕ್ತರನ್ನು ತಕ್ಷಣವೇ ನೇಮಕ ಮಾಡದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿರುದ್ಧ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಮುಂದಿನ 4 ವಾರಗಳ ಒಳಗಾಗಿ ಈ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳಿಗೆ ಸ್ಪಷ್ಟ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠವು ಅರ್ಜಿಯೊಂದರ ವಿಚಾರಣೆ ವೇಳೆ ಈ ಆದೇಶ ನೀಡಿದೆ. "ಆಯುಕ್ತರ ನೇಮಕದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಅಥವಾ ವಿಳಂಬವನ್ನು ನ್ಯಾಯಾಲಯವು ಗಂಭೀರವಾಗಿ ಪರಿಗಣಿಸಲಿದೆ" ಎಂದು ಪೀಠವು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ.ದೆಹಲಿ, ಹರಿಯಾಣ, ರಾಜಸ್ಥಾನ, ಹಿಮಾಚಲ ಪ್ರದೇಶ, ಕರ್ನಾಟಕ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ತಕ್ಷಣವೇ ಸ್ವತಂತ್ರ ಹೊಣೆಗಾರಿಕೆಯುಳ್ಳ ಆಯುಕ್ತರನ್ನು ನೇಮಿಸಬೇಕು.

ಕೇಂದ್ರ ವಿಕಲಚೇತನರ ಮುಖ್ಯ ಆಯುಕ್ತರು ಹಾಗೂ ಇಬ್ಬರು ಹೆಚ್ಚುವರಿ ಆಯುಕ್ತರ ಹುದ್ದೆಗಳನ್ನು ಸಹ 4 ವಾರಗಳ ಒಳಗಾಗಿ ಭರ್ತಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಲಾಯಿತು.ಕಟ್ಟಡಗಳ ವಿನ್ಯಾಸ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಹಾಗೂ ಸಹಾಯಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಪ್ರವೇಶಸಾಧ್ಯತೆಯ ನಿಯಮಗಳನ್ನು 6 ತಿಂಗಳ ಒಳಗಾಗಿ ಅಂತಿಮಗೊಳಿಸಬೇಕು.

ಕಾಯ್ದೆ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸಲು ಮತ್ತು ಅದನ್ನು ವಸೂಲಿ ಮಾಡಲು ಸೂಕ್ತ ಕಾನೂನು ಚೌಕಟ್ಟನ್ನು ರೂಪಿಸುವಂತೆ ಕೋರ್ಟ್ ಸೂಚಿಸಿದೆ.

ವಿಕಲಚೇತನರಿಗೆ ಸಮಾಜದಲ್ಲಿ ಸಮಾನ ಅವಕಾಶ ಮತ್ತು ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಈ ಆದೇಶವು ಅತ್ಯಂತ ಮಹತ್ವದ್ದಾಗಿದೆ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದ್ದಾರೆ.

# ಸಮಾಜದ ಉನ್ನತಿಗೆ ಅವಧೂತರ ಶ್ರಮ

**ಬೀದರ್:** ಡಾ. ಬಸವಲಿಂಗ ಅವಧೂತರು ಸಮಾಜದ ಉನ್ನತಿಗೆ ಅವಿರತ ಶ್ರಮಿಸುತ್ತಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದರು.

ನೆರೆಯ ತೆಲಂಗಾಣದ ಜಹೀರಾಬಾದ್ ಸಮೀಪದ ಮಲಯ್ಯಗಿರಿ ಆಶ್ರಮದಲ್ಲಿ ಬುಧವಾರ ನಡೆದ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರ 50ನೇ ಜನ್ಮದಿನಾಚರಣೆ ಹಾಗೂ ಅವಧೂತ ವೈಭವ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅನಿಷ್ಠ ಪದ್ಧತಿ, ಭಕ್ತರ ಸಂಕಷ್ಟ ನಿವಾರಣೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಸರಳತೆಗೆ ಇನ್ನೊಂದು ಹೆಸರಾಗಿದ್ದಾರೆ. ಮಠದಿಂದ ಸ್ವಾಮೀಜಿ ಅಲ್ಲ, ಸ್ವಾಮೀಜಿಯಿಂದ ಮಠ ಎಂಬುದ್ದನ್ನು ತೋರಿಸಿದ್ದಾರೆ ಎಂದು ತಿಳಿಸಿದರು.

ಮಲ್ಲಯ್ಯಗಿರಿ ಹಾಗೂ ಕಲಬುರಗಿ ಜಿಲ್ಲೆಯ ದೇಗಲಮಡಿಯಲ್ಲಿ ಬಹಳ ಪರಿಶ್ರಮ ಪಟ್ಟು ಆಶ್ರಮ ಕಟ್ಟಿ ಬೆಳೆಸಿದ್ದಾರೆ. ಜನರಿಗೆ ಸನ್ಮಾರ್ಗವನ್ನು ತೋರುತ್ತಿದ್ದಾರೆ ಎಂದು ತಿಳಿಸಿದರು.

ಮಲ್ಲಯ್ಯಗಿರಿ ಆಶ್ರಮ ಬೃಹತ್ ಆಗಿ ಬೆಳೆಯಲು ಭಕ್ತರೇ ಕಾರಣ. ಸಮಾಜದ ಒಳಿತು ಹಾಗೂ ಭಕ್ತರ ಕಲ್ಯಾಣವೇ ನನ್ನ ಧ್ಯೇಯ ಎಂದು ಸಾನಿಧ್ಯ ವಹಿಸಿದ್ದ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ಹೇಳಿದರು.

ತಮ್ಮ 50ನೇ ಜನ್ಮದಿನದ ಸಂದರ್ಭದಲ್ಲಿ ಸಾಹಿತಿಗಳು ಹಾಗೂ ಲೇಖಕರು ಕನ್ನಡದಲ್ಲಿ ಅಭಿನಂದನಾ ಗ್ರಂಥ ಹೊರ ತಂದಿರುವುದು ಸಂತಸ ಉಂಟು ಮಾಡಿದೆ. ಬರುವ ದಿನಗಳಲ್ಲಿ ಗ್ರಂಥವನ್ನು ತೆಲುಗು, ಮರಾಠಿ ಹಾಗೂ ಇಂಗ್ಲಿಷ್‌ಗೆ ತರ್ಜುಮೆ ಮಾಡಲಾಗುವುದು ಎಂದು ತಿಳಿಸಿದರು.

ಅವಧೂತ ವೈಭವ ಅದ್ಭುತ ಕೃತಿಯಾಗಿದೆ. 304 ಪುಟಗಳ ಕೃತಿ 62 ಲೇಖನ, ಕವನಗಳನ್ನು ಒಳಗೊಂಡಿದೆ. ಸಾಹಿತಿಗಳು, ಲೇಖಕರು ಹಾಗೂ ಬರಹಗಾರರು ಡಾ. ಬಸವಲಿಂಗ ಅವಧೂತರ ಜೀವನ ಹಾಗೂ ಸಾಧನೆಯನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಎಲ್ಲರೂ ಓದಲೇಬೇಕಾದ ಕೃತಿ ಇದು ಎಂದು ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ

ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಬಸವಲಿಂಗ ಅವಧೂತರ ಸಮಾಜೋ ಧಾರ್ಮಿಕ ಕಾರ್ಯಗಳು ಮಾದರಿಯಾಗಿವೆ ಎಂದು ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಹೇಳಿದರು.

ಕರ್ನಾಟಕ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಬಸವರಾಜ ಬಲ್ಲೂರ ಆಶಯ ನುಡಿ ಆಡಿದರು.

ಇದೇ ವೇಳೆ ಡಾ. ಬಸವಲಿಂಗ ಅವಧೂತರು ರಚಿಸಿದ 'ಒಲಿದು ಹಾಡಿದ ಗೀತೆಗಳು' ಕೃತಿ ಹಾಗೂ ಬೀದರ್‌ನ ಶಿಕ್ಷಕಿ, ಸಾಹಿತಿ ಮಾಣಿಕಾದೇವಿ ಪಾಟೀಲ ಅವರ 'ಬಾಳ್ವೆಗೆ



ಬದುಕು' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ಡಾ. ಎಸ್.ಜಿ. ಸುಶೀಲಮ್ಮ ಸಾನಿಧ್ಯ ವಹಿಸಿದ್ದರು. ಮಾಜಿ ಸಂಸದ ಬಿ.ಬಿ. ಪಾಟೀಲ, ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷೆ ಸುನಿತಾ ಪಾಟೀಲ, ಮುಖಂಡ ಹಣಮಂತರಾವ್ ಪಾಟೀಲ, ಅಭಿನಂದನಾ ಗ್ರಂಥದ ಸಂಪಾದಕ ದೇವೇಂದ್ರ ಕರಂಜೆ, ನಿವೃತ್ತ ಮುಖ್ಯಶಿಕ್ಷಕ ಸಿದ್ದಾರೆಡ್ಡಿ ನಾಗೋರಾ, ಕನ್ನಡ ಸಾಹಿತ್ಯ ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಎಂ. ಮಚ್ಚೆ, ಸರ್ಕಾರಿ ಪದವಿ ಕಾಲೇಜು ಪ್ರಾಧ್ಯಾಪಕ ಈಶ್ವರಯ್ಯ ಕೊಡಂಬಲ್, ಡಾ. ರಾಮಚಂದ್ರ ಗಣಾಪುರ, ಮಲ್ಲಿಕಾರ್ಜುನ ಪಾಟೀಲ ಮುಗನೂರ, ಶಿವಕುಮಾರ ಮೂಲಗೆ, ಶಿವಕುಮಾರ ಪಟಪಳ್ಳಿ ಮತ್ತಿತರರು ಇದ್ದರು. ಪತ್ರಕರ್ತ ನಾಗೇಶ ಪ್ರಭಾ ನಿರೂಪಿಸಿದರು.

ಗುರು ಪೂರ್ಣಿಮೆ ಅಂಗವಾಗಿ ಭಕ್ತರು ರುದ್ರಾಕ್ಷಿ ಹಾಗೂ ವಿಭೂತಿಗಳಿಂದ ಡಾ. ಬಸವಲಿಂಗ ಅವಧೂತರ ತುಲಾಭಾರ ಮಾಡಿದರು. ವಿವಿಧೆಡೆಯ ಅಪಾರ ಭಕ್ತರು ಪಾಲ್ಗೊಂಡಿದ್ದರು. ಒಚಿಠಿ

ಅವಧೂತ ರತ್ನ: ಮಲ್ಲೇಪುರಂ ಬಣ್ಣನೆ

ಬೀದರ್: ಡಾ. ಬಸವಲಿಂಗ ಅವಧೂತರು 'ಅವಧೂತ ರತ್ನ'ರಾಗಿದ್ದಾರೆ ಎಂದು ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಬಣ್ಣಿಸಿದರು.

ಮಲ್ಲಯ್ಯಗಿರಿ ಆಶ್ರಮದಲ್ಲಿ ನಡೆದ ಡಾ. ಬಸವಲಿಂಗ ಅವಧೂತರ 50ನೇ ಜನ್ಮದಿನದ ಸುವರ್ಣ ಮಹೋತ್ಸವ ಹಾಗೂ ಅವಧೂತ ವೈಭವ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಅವಧೂತರು ಎಲ್ಲ ತ್ಯಾಗ ಮಾಡಿದವರು. ಅಂಥವರಲ್ಲಿ ಬಸವಲಿಂಗ ಅವಧೂತರು ಒಬ್ಬರು ಎಂದು ಹೇಳಿದರು.

ಅವಧೂತರಲ್ಲಿ ತೇಜಸ್ಸು, ಹೃದಯ ವೈಶಾಲ್ಯತೆ, ಸೇವಾ ತುಡಿತ ಇದೆ. ಅಂತೆಯೇ ಅವರು ಅಸಂಖ್ಯಾತ ಭಕ್ತರ ಹೃದಯದಲ್ಲಿ ನೆಲೆ ನಿಂತಿದ್ದಾರೆ ಎಂದು ಹೇಳಿದರು.

# ಶ್ವಾಸಕೋಶದ ಕ್ಯಾನ್ಸರ್ ಬಗ್ಗೆ ಇರಲಿ ಎಚ್ಚರ



ಇತ್ತೀಚಿನ ದಿನಗಳಲ್ಲಿ ಶ್ವಾಸಕೋಶದ ಕ್ಯಾನ್ಸರ್ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಅದರಲ್ಲೂ ಮಹಿಳೆಯರಲ್ಲಿ ದಿನೇ ದಿನೇ ಶ್ವಾಸಕೋಶದ ಕ್ಯಾನ್ಸರ್ ಸಮಸ್ಯೆ ವೃದ್ಧಿಯಾಗುತ್ತಿದೆ ಎಂಬುದನ್ನು ಇನ್ನಷ್ಟು ಆತಂಕ ಹುಟ್ಟಿಸಿದೆ.

ತ ' ಜ ಣ್ಣ ರ ' ಪ್ರಕಾರ,ತೂಕನಷ್ಟ,ಕಫಉತ್ಪತ್ತಿ, ಕಫದೊಂದಿಗೆ ರಕ್ತಬರುವುದು ಶ್ವಾಸಕೋಶದ ಕ್ಯಾನ್ಸರ್‌ನ ಕೆಲವು ಪ್ರಮುಖ ಲಕ್ಷಣಗಳು. ಕ್ಯಾನ್ಸರ್ ಶ್ವಾಸಕೋಶಗಳಿಂದ ಹರಡಿದರೆ, ಅದು ಯಕೃತ್ತನ್ನು ಸೇರಿ ಕಾಮಾಲೆ ರೋಗಕ್ಕೆ ಕಾರಣವಾಗುತ್ತದೆ, ಅಡ್ರಿನಲ್ ಗ್ರಂಥಿಗಳಿಗೆ ಸೇರಿದರೆ ಅವು ವೈಫಲ್ಯ ಅನುಭವಿಸುತ್ತವೆ. ಇದರಿಂದ ರಕ್ತದೊತ್ತಡ ಕುಸಿತದಂತಹ ತುರ್ತು ಸ್ಥಿತಿಯನ್ನು ತಂದೊಡ್ಡುತ್ತದೆ. ಎಲುಬುಗಳಲ್ಲಿನೋವು ಮತ್ತು ಮುರಿತಉಂಟಾಗುತ್ತದೆ. ಕ್ಯಾನ್ಸರ್ ಮೆದುಳನ್ನು ತಲುಪಿದಾಗ ಪಾರ್ಶ್ವವಾಯು ಅಥವಾ ಸೆಳವು ಉಂಟಾಗುತ್ತದೆ.

ಕೈಗಾರಿಕೆಗಳು, ಗಣಿಗಾರಿ-ಕೆ ವಲಯಗಳಲ್ಲಿ ಕೆಲಸ ಮಾಡುವಂತಹ ಔದ್ಯೋಗಿಕ ಅಂಶಗಳ ಹೊರತಾಗಿ, ಸಿಗರೆಟ್‌ಗಳಸೇವನೆ, ತಂಬಾಕು ಜಗಿಯುವುದು,ಖೇಣಿ, ಹುಕ್ಕಾ, ತಂಬಾಕಿನ ಜತೆಗೆ ವೀಳ್ಯದೆಲೆ ತಿನ್ನುವುದು, ಹಿಮ್ಮುಖ ಧೂಮಪಾನ, ಅಡುಗೆಮನೆಯ ಹೊಗೆ ಮತ್ತು ವಾಹನಗಳ ಮಾಲಿನ್ಯ ಮುಂತಾದವು ಶ್ವಾಸಕೋಶದ ಕ್ಯಾನ್ಸರ್ ಮುಖ್ಯ ಕಾರಣಗಳಾಗಿವೆ. ಮುಂದಿನ ಕೆಲವು ವರ್ಷಗಳಲ್ಲಿ ತಂಬಾಕು-ಸಂಬಂಧಿಮಾರಕ ರೋಗಗಳ ಹೊರೆಭಾರತದಲ್ಲಿ 12 ಪ್ರತಿಶತಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ.

ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನಕ್ಕೆ ಪೂರ್ವಭಾವಿಯಾಗಿ, ನ್ಯೂಬರ್ಗ್ ಸೆಂಟರ್ ಫಾರ್ ಜೀನೋಮಿಕ್ ಮೆಡಿಸಿನ್ ಆಯೋಜಿಸಿದ್ದ ಪ್ಯಾನಲ್ಲಿ ಶ್ವಾಸಕೋಶದ ಕ್ಯಾನ್ಸರ್ ತಜ್ಞರು'ಶ್ವಾಸಕೋಶದ ಕ್ಯಾನ್ಸರ್ ಪತ್ತೆ- ಎಷ್ಟು ತಡವಾಗಿ

ತಡವಾಗಿಯೇ?' ಎಂಬುದಕ್ಕೆ

ಸಂಬಂಧಿಸಿನಡೆಸಿದಚರ್ಚೆಯಲ್ಲಿ, ಇತ್ತೀಚೆಗೆ, ಹೆಚ್ಚಿನ ಸಂಖ್ಯೆಯ ಮಹಿಳೆಯರು ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳನ್ನು ವರದಿ ಮಾಡುತ್ತಿದ್ದಾರೆ ಎಂಬ ಮಾಹಿತಿ ಹಂಚಿಕೊಂಡಿದ್ದಾರೆ. ಬಹುತೇಕ ಸಂದರ್ಭಗಳಲ್ಲಿ ಆರಂಭಿಕಹಂತಗಳಲ್ಲಿ ಕ್ಯಾನ್ಸರನ್ನು ಕ್ಷಯವೆಂದು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗುತ್ತದೆ.ಎರಡರ ರೋಗಲಕ್ಷಣಗಳೂ ಬಹುತೇಕ ಒಂದೇ ರೀತಿ ಇರುವುದು ಇದಕ್ಕೆ ಕಾರಣ. ಎರಡೂ ಪ್ರಕರಣಗಳಲ್ಲಿ, ರೋಗಿಯು ಕೆಮ್ಮು ಹಾಗೂ ಅಥವಾ ರಕ್ತ ಸಹಿತವಾದ ಕೆಮ್ಮನ್ನು ಹೊಂದಿರುತ್ತಾರೆ.ಧೂಮಪಾನವು ಶ್ವಾಸಕೋಶದ ಕ್ಯಾನ್ಸರ್ ಪ್ರಮುಖ ಕಾರಣವಾಗಿದೆ. ಧೂಮಪಾನಿಗಳು ಹಾಗೂ ಧೂಮಪಾನಿಗಳಲ್ಲದವರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಉಂಟಾಗುವ ಅಪಾಯವು 20:1ರಷ್ಟಿರುತ್ತದೆ.ಧೂಮಪಾನಿಗೆ ಹೋಲಿಸಿದರೆ ನಿಷ್ಕ್ರಿಯ ಧೂಮಪಾನಿ ಕ್ಯಾನ್ಸರ್ ತುತ್ತಾಗುವ ಸಾಧ್ಯತೆ ಸಮನಾಗಿರುತ್ತದೆ ಅಥವಾ ಹೆಚ್ಚಾಗಿರುತ್ತದೆ. ಆರಂಭಿಕ ಹಂತದಲ್ಲಿ ರೋಗಿಗಳನ್ನು ಗುಣಪಡಿಸಲು, ಶಸ್ತ್ರಚಿಕಿತ್ಸೆಯು ತುಂಬ ಮುಖ್ಯವಾದ ವಿಧಾನವಾಗಿದ್ದು,ಆಬಳಿಕವಿಕಿರಣ ಚಿಕಿತ್ಸೆಯನ್ನು ನೀಡಲಾಗುತ್ತದೆ. ಈಗ ಹೆಚ್ಚು ಸುಧಾರಿತ ಚಿಕಿತ್ಸಾ ವಿಧಾನಗಳಾದ ಉದ್ದೇಶಿತ ಚಿಕಿತ್ಸೆ ಮತ್ತು ಇಮ್ಯುನೊಥೆರಪಿ ಆಯ್ಕೆಗಳು ಲಭ್ಯವಿವೆ. ಇವು ಜೀವಿತಾವಧಿಯನ್ನು ಹೆಚ್ಚಿಸುತ್ತವೆ ಮತ್ತು ಉತ್ತಮ ಗುಣಮಟ್ಟದ ಜೀವನಕ್ಕೆ ಕಾರಣವಾಗುತ್ತವೆ.

ಕೀಮೋಥೆರಪಿಗೆ ಹೋಲಿಸಿದರೆ ಉದ್ದೇಶಿತ ಚಿಕಿತ್ಸೆ ಮತ್ತು ಇಮ್ಯುನೋಥೆರಪಿಗಳು ತುಂಬ ಕಡಿಮೆ ಅಡ್ಡ ಪರಿಣಾಮಗಳನ್ನು ಹೊಂದಿವೆ. ಉತ್ತಮ ಬದುಕುಳಿಯುವಿಕೆಯ ದರಗಳಿಗೆ ಕಾರಣವಾಗುವ ಚಿಕಿತ್ಸೆಯ ಆಯ್ಕೆಗಳನ್ನು ನಿರ್ಧರಿಸುವಲ್ಲಿ ಜೆನೆಟಿಕ್ ಪರೀಕ್ಷೆಯು ವರದಾನವಾಗಿದೆ.

# ಸಮಾನತೆಯ ಕ್ರಾಂತಿಗೆ ಕೈಜೋಡಿಸಿದ ಹಡಪದ ಅಪ್ಪಣ್ಣ:ಶಂಕರಗೌಡ

**ಬಸವನಬಾಗೇವಾಡಿ, ಜು. 30:** ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಆಪ್ತ ಸಹಾಯಕರಾಗಿದ್ದ ಹಡಪದ ಅಪ್ಪಣ್ಣನವರು ಕಾಯಕ, ದಾಸೋಹ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ತಮ್ಮ ವಚನಗಳ ಮೂಲಕ ಪ್ರತಿಪಾದಿಸುವುದರ ಜೊತೆಗೆ ಬಸವಣ್ಣನವರ ಕ್ರಾಂತಿಯ ಪ್ರಭಾವಕ್ಕೆ ಒಳಗಾಗಿ ಹಡಪದ ಅಪ್ಪಣ್ಣ ಅವರು ಸಹ ಅನುಭವ ಮಂಟಪವನ್ನು ಸೇರಿಕೊಂಡು ಸಾಮಾಜಿಕ ಕ್ರಾಂತಿಗೆ ಧುಮುಕಿದರು ಎಂದು ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ,ಹೇಳಿದರು.

ಶಿವಶರಣ ಹಡಪದ ಅಪ್ಪಣ್ಣನವರ ಜಯಂತಿಯನ್ನು ಬಸವನಬಾಗೇವಾಡಿಯ ವೀರ ರಾಣಿ ಚನ್ನಮ್ಮ ವೃತ್ತದಲ್ಲಿ ರಾಷ್ಟ್ರೀಯ ಬಸವಸೈನ್ಯ ಸಂಘಟನೆಯ ವತಿಯಿಂದ ಆಚರಿಸಲಾಯಿತು.

ಹಡಪದ ಅಪ್ಪಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು

"ಕಾಯಕವೇ ಕೈಲಾಸ" ಎಂಬ ತತ್ವವನ್ನು ತಮ್ಮ ಜೀವನದಲ್ಲಿ ಅನುಸರಿಸಿದ ಹಡಪದ ಅಪ್ಪಣ್ಣನವರು ಶ್ರಮದ ಗೌರವ ಮತ್ತು ಸಾಮಾಜಿಕ ಸಮಾನತೆಯ ಸಂದೇಶವನ್ನು ನೀಡಿದ್ದರು ಎಂದು ಅವರು ಹೇಳಿದರು. ಅವರ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಯುವಜನತೆ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಅವರು ಮುಂದುವರಿದು ಮಾತನಾಡಿ, ಹಡಪದ ಅಪ್ಪಣ್ಣನವರ ಜನ್ಮಸ್ಥಳ ಮಸಬಿನಾಳ ಗ್ರಾಮದಲ್ಲಿ ಸ್ಮಾರಕ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಹಡಪದ ಸಮಾಜದ ಮುಖಂಡ ಪತ್ರಕರ್ತ ನಾಗೇಶ ನಾಗೂರ ಹಾಗೂ ರಾಷ್ಟ್ರೀಯ ಬಸವಸೈನ್ಯದ ಮುಖಂಡ ಶ್ರೀಕಾಂತ ಕೊಟ್ರಶೆಟ್ಟಿ ಮಾತನಾಡಿ, ಹಡಪದ ಅಪ್ಪಣ್ಣನವರ



ವಚನಗಳು ಸಮಾಜದಲ್ಲಿ ಸಮಾನತೆ ಮತ್ತು ಶ್ರಮದ ಗೌರವವನ್ನು ಉತ್ತೇಜಿಸುವಲ್ಲಿ ಪಾತ್ರವಹಿಸಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಟ್ಟಿಂಗರಾಯ ಮಾಲಗಾರ, ಪ್ರಶಾಂತ ಮುಂಜಾನೆ, ಸಂಗಮೇಶ ಜಾಲಗೇರಿ, ರಾಷ್ಟ್ರೀಂಯ ಬಸವಸೈನ್ಯದ ತಾಲೂಕ ಅಧ್ಯಕ್ಷ ಸಂಜು ಬಿರಾದಾರ,ಮುಖಂಡರಾದ ಭದ್ರಣ್ಣ ಮಣ್ಣೂರ,ಆನಂದ ವನರೊಟ್ಟಿ,ಹಡಪದ ಸಮಾಜದ ತಾಲೂಕು ಅಧ್ಯಕ್ಷ ಮಾಂತೇಶ ಹಡಪದ, ಅಪ್ಪು ಗಬ್ಬೂರ,ರಾಜು ಹಡಪದ, ಮುತ್ತಪ್ಪ ಇವಣಗಿ,ಚಂದ್ರಮ ಹಡಪದ, ಮಲ್ಲಿಕಾರ್ಜುನ ಇವಣಗಿ,ಮಾಂತೇಶ ಹೆಬ್ಬಾಳ,ಮಲ್ಲು ಬನಾಸಿ,ಪ್ರಲ್ಹಾದ ಹಡಪದ ಮಹಾದೇವ ನಾಯ್ಕೋಡಿ,ಸೇರಿದಂತೆ ಸಮಾಜದ ಸದಸ್ಯರು, ಸಂಘಟನೆಗಳ ಪದಾಧಿಕಾರಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ವಿಶೇಷ ಚೇತನರ ಪೋಷಕರು ದೃತಿಗೆಡಬೇಕಾಗಿಲ್ಲ



**ಕೆಂಗೇರಿ,ಜು30:** ವಿಶೇಷ ಚೇತನರ ಪೋಷಕರು ಯಾವುದೇ ಕಾರಣಕ್ಕೂ ದೃತಿಗೆಡಬೇಕಾಗಿಲ್ಲ, ನಿಮ್ಮೊಂದಿಗೆ ಸರ್ಕಾರ, ಸಮುದಾಯ, ಸಮಾಜ ಒಗ್ಗಟ್ಟಾಗಿ ನಿಂತು ವಿಶೇಷ ಚೇತನರ ಸಬಲೀಕರಣಕ್ಕಾಗಿ ಎಲ್ಲ ರೀತಿಯ ಸಹಕಾರ, ಪ್ರೋತ್ಸಾಹ ನೀಡಿ ಕಾರ್ಯನಿರ್ವಹಿಸಲಾಗುವುದು ಎಂದು ಶಾಸಕ ಎಸ್. ಟಿ. ಸೋಮಶೇಖರ್ ತಿಳಿಸಿದರು.ಯಶವಂತಪುರ ವಿಧಾನಸಭಾ ಕ್ಷೇತ್ರ ಆಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಕ್ಷ್ಮಿಪುರ ಗ್ರಾಮದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ವಿಶೇಷಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಗ್ರಾಮೀಣ ಕೈಗಾರಿಕೆಗಳ ವಿಭಾಗದ ವತಿಯಿಂದ ವಿಶೇಷ ಚೇತನರಿಗೆ ತ್ರಿಚಕ್ರ ವಾಹನಗಳು, ಉಚಿತ ಬಸ್ ಪಾಸ್, ವೀಲ್ ಚೇರ್ ಯುಡಿಐಡಿ ಕಾರ್ಡ್ ಹಾಗೂ ವಿಶೇಷ ಚೇತನ ಕುಟುಂಬಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಿ ಮಾತನಾಡಿದರು. ಅಗರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಲತಾ ಮಂಜುನಾಥ್ ಮಾತನಾಡಿ ವಿಶೇಷ ಚೇತನರು ಕ್ರೀಡೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅಪಾರ ಸಾಧನೆ ಮಾಡುವ ಮೂಲಕ ದೇಶಕ್ಕೆ ಕೀರ್ತಿ ತಂದಿರುವುದು ಅವರ ಅಪಾರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ ಎಂದರು. ವಿಶೇಷ ಚೇತನರ ಸರ್ವಾಂಗೀಣ ಅಭ್ಯುದಕ್ಕಾಗಿ ಹಗಲಿರುಳು ಶ್ರಮಿಸುವುದಾಗಿ ತಿಳಿಸಿದರು.ಬಿಎಸ್‌ಎಸ್ಯನ್ನ ಮಾಜಿ ಅಧ್ಯಕ್ಷ ರಾಮಕೃಷ್ಣ,ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ದೇವರಾಜ್, ಎಂ ಆರ್ ಡಬ್ಲ್ಯೂ ನೋಡಲ್ ಅಧಿಕಾರಿ ಗೋಪಾಲಕೃಷ್ಣ, ಸೋಮನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ರುಕ್ಮಿಣಿಬಾಯಿ, ಶನೇಶ್ವರ ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷ ನಂಜುಂಡಪ್ಪ,ಇಲಾಖೆ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಸದಸ್ಯರುಗಳು ಮತ್ತಿತರರು ಉಪಸ್ಥಿತರಿದ್ದರು.

# ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲ:ಕೂಚಬಾಳ



**ತಾಳಿಕೋಟೆ:ಜು.30:** ರಾಜ್ಯದಲ್ಲಿ ಬೀಕರ ಬರಗಾಲ ಆವರಿಸಿಕೊಂಡಿದೆ ಇಂತಹ ಸಂದರ್ಬದಲ್ಲಿ ರೈತರ ಹಾಗೂ ಜನರ ನೆರವಿಗೆ ಬರಬೇಕಾದ ರಾಜ್ಯ ಸರ್ಕಾರ ನಿರಾಸಕ್ತಿ ವಹಿಸುತ್ತಾಸಾಗಿದೆ ಎಂದು ಬಿಜೆಪಿ ನಿಕಟಪೂರ್ವ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಹೇಳಿದರು.

ಬುಧವಾರರಂದು ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ರಾಜ್ಯದ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕಾದ ಮುಖ್ಯಮಂತ್ರಿಗಳು ಬರಗಾಲ ನಿರ್ವಹಣೆಗೆ ಕೇಂದ್ರ ಸರ್ಕಾರಕ್ಕೆ ಪತ್ರಬರೆದಿದ್ದೇವೆಂದು ಹಾರಿಕೆ ಉತ್ತರ ನೀಡುತ್ತಾ ಸಾಗಿದ್ದಾರೆ ಬರದ ಛಾಯೆ ರೈತರಿಗೆ ಸಂಕಷ್ಟಕ್ಕೆ ದೂಡಿದೆ ಆದರೆ ಕ್ಷೇತ್ರದಲ್ಲಿದ್ದುಕೊಂಡು ಕೆಲಸ ಮಾಡಬೇಕಾದ ಕಾಂಗ್ರೆಸ್ಸಿನ ಶಾಸಕರು ತಮ್ಮ ತಮ್ಮ ಮಂತ್ರಿ ಆಸೆಗಾಗಿ ದೆಹಲಿ, ಬೆಂಗಳೂರ ಪ್ರವಾಸದಲ್ಲಿ ತೊಡಗಿಕೊಂಡಿದ್ದಾರೆಂದು ಆರೋಪಿಸಿದರು.

ಉಸ್ತುವಾರಿಮಂತ್ರಿ ಬಬಲೇಶ್ವರಕ್ಕೆ ಸೀಮಿತನಾ?

ರೈತರ ಸಂಕಷ್ಟದ ಸಂದರ್ಬದಲ್ಲಿ ನೆರವಿಗೆ ಬರಬೇಕಾದ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಕೇವಲ ಬಬಲೇಶ್ವರ ಒಂದೇ ಕ್ಷೇತ್ರ ಜಿಲ್ಲೆ ಎಂದು ತಿಳಿದುಕೊಂಡು ಸಾಗಿದ್ದಾರೆ ವಿಜಯಪುರ ಜಿಲ್ಲೆಯಲ್ಲಿ 8 ವಿಧಾನ ಸಭಾ ಕ್ಷೇತ್ರವೆಂಬುದನ್ನು ಮರೆತಿದ್ದಾರೆಂದು ಆರೋಪಿಸಿದ ಅವರು ಬೂದಿಹಾಳ–ಫೀರಾಪೂರ ಏತ ನೀರಾವರಿ ಯೋಜನೆ ಮುಕ್ತಾಯಗೊಳಿಸುವ ಸಲುವಾಗಿ ಕಳೆದ 1 ವರ್ಷಗಳ ಹಿಂದೆ ರೈತರೆಲ್ಲರೂ ಒಗ್ಗೂಡಿ ಬೃಹತ್ ಹೋರಾಟ ನಡೆಸಿದ್ದಾಗ ಸ್ಥಳಕ್ಕೆ ಆಗಮಿಸಿದ ಎಂಬಿ ಪಾಟೀಲರು ಕೂಡಲೇ ಕೆಲಸ ಮುಗಿಸಿಕೊಡುತ್ತೇನೆ ಕೇವಲ 200 ಕೋಟಿ ರೂ. ಕೆಲಸ ಭಾಕಿ ಉಳಿದಿದೆ ಸಾವಿರಾರು ಕೋಟಿ ಕೆಲಸ ಮುಗಿದಿದೆ ಇನ್ನೇನೂ ಸಣ್ಣ ಅಮೌಂಟಿಂದು ಉಳಿದಿದೆ ವರ್ಷದೊಳಗೆ ಮುಗಿಸಿಕೊಡುತ್ತೇನೆಂದು ಹೇಳಿ ಪ್ರತಿಭಟನಾ ನಿರತ ರೈತರಿಗೆ ಮೂಗಿಗೆ ತುಪ್ಪ ಸವರುವಂತಹ ಕೆಲಸ ಮಾಡಿ ಹೋದವರು ಇನ್ನೂವರೆಗೂ ಈ ಯೋಜನೆ ಮುಕ್ತಾಯಗೊಳಿಸಲು ಚಕಾರ ಶಬ್ದ ಎತ್ತುತ್ತಿಲ್ಲಾ ಈ ಬೂದಿಹಾಳ–ಫೀರಾಪೂರ ಎಫ್‌ಆಯ್‌ಸಿ ಕಾಲುವೆ ನಿರ್ಮಾಣಕ್ಕೆ ಸಂಬಂದಿಸಿ ಕೆಲಸದಲ್ಲಿ ಯಾವುದೇ ಪ್ರೋಗ್ರೇಸ್‌ಕೂಡಾ ಪ್ರಾರಂಬವಾಗಿಲ್ಲಾ ಹೀಗಾಗಿ ಮತ್ತೇ ರೈತರೆಲ್ಲರೂ ಒಗ್ಗೂಡಿ ಬೀದಿಗಿಳಿದು ಹೋರಾಟ ನಡೆಸಿದ್ದಾರೆ ಆದರೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಏನೂ ಗೊತ್ತಿಲ್ಲದಂತೆ ಕ್ಷೇತ್ರವನ್ನೇ ಜಿಲ್ಲೆ ಎಂದು ತಿಳಿದು ಅಲ್ಲೇ ಸುತ್ತಾಡುತ್ತಿದ್ದಾರೆಂದು ಆರೋಪಿಸಿದರು.

ಗ್ರಾಂಪಂ–ಪುರಸಭೆಗೂ ಇಲ್ಲಾ ಅನುದಾನ

ಇಡೀ ರಾಜ್ಯದಲ್ಲಿ ಕಾಂಗ್ರೇಸ್ ಸರ್ಕಾರ ಎಲ್ಲರೀತಿಯಿಂದಲೂ ವೈಫಲ್ಯದಲ್ಲಿ ಮುಂದುವರೆದಿದೆ ಗ್ರಾಂಪಂಗಳಿಗೆ ಕಳೆದ 2 ವರ್ಷಗಳಿಂದಲೂ 15 ನೇ ಹಣಕಾಸು ಒಳಗೊಂಡು ಯಾವುದೇ ರೀತಿಯ ಅನುದಾನ ಬಿಡುಗಡೆಗೊಳಿಸಿಲ್ಲಾ ಕೇವಲ ತೆರಿಗೆ ವಸೂಲಿಯ ಮೇಲೆ ವಿದ್ಯುತ್ ಬಿಲ್ ಇನ್ನಿತರ ಕಚೇರಿ ಕೆಲಸಗಳನ್ನು ಮಾಡಿಕೊಂಡು ದಿನ ದೂಡುವಂತಹ ಪರಸ್ಥಿತಿ ಗ್ರಾಂಪಂಗಳಿಗೆ ಬಂದೊದಗಿದೆ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳಿಗೂ ಇದೇ ರೀತಿಯಾದ ಅನುದಾನದ ಕೊರತೆಯಿಂದ ಯಾವದೇ ಅಭಿವೃದ್ಧಿ ಕೆಲಸ ಕಾರ್ಯಗಳು ಮಾಡಲು ಆಗದ ಪರಸ್ಥಿತಿ ಬಂದೊದಗಿದೆ ಎಂದು ಆರೋಪಿಸಿದ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿಗಳ ಪೂರೈಕೆ ಇಲ್ಲಾ ಹೀಗಾಗಿ ವೈದ್ಯರು ಔಷಧಿಗಳು ಇಲ್ಲದಕ್ಕೆ ಹೊರಗಡೆ ತೊರಿಸಿಕೊಳ್ಳಲು ಹೋಗಿ ಎಂಬ ಪರಸ್ಥಿತಿ ಬಂದೊದಗಿದೆ ಇದೇಲ್ಲವನ್ನು ಮರೆ ಮಾಚಲು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾ ಸಚೀವರು, ಶಾಸಕರು ಕಾಲಹರಣ ಮಾಡುತ್ತಿದ್ದಾರೆ ಸಚೀವ ಪ್ರೀಯಾಂಕಾ ಖರ್ಗೆ ಬೆಳಗಾದರೆ ಆರ್‌ಎಸ್‌ಎಸ್ ಜಪಿಸುವ ಚಿಂತೆಯಾಗಿದೆ ಇದನ್ನೇ ವೈಬವಿಕರಿಸಿ ರಾಜ್ಯದ ಜನರ ದಿಕ್ಕ ತಪ್ಪಿಸಿ ಸರ್ಕಾರದ ವೈಫಲ ಮರೆಮಾಚುವ ಕೆಲಸ ನಡೆದಿದೆ ಎಂದು ಆರ್.ಎಸ್.ಪಾಟೀಲ(ಕೂಚಬಾಳ) ಅವರು ಆರೋಪಿಸಿದರು.

ದರ ಹೆಚ್ಚಳದಲ್ಲಿ ಮೊಳಗಿದ ಸರ್ಕಾರ

ಕಾಂಗ್ರೆಸ್‌ನ ಯೋಜನೆಗಳು ಯಾವು ಜನರಿಗೆ ಮುಟ್ಟುತ್ತಿಲ್ಲಾ ಹಾಲಿನಿಂದ ಹಿಡಿದು ಆಲ್ಕೋಹಾಲ್‌ದವರೆಗೂ ದರವನ್ನು ಹೆಚ್ಚಿಗೆ ಮಾಡಿದ್ದಾರೆ ಜನನ ಉತ್ತಾರೆದಿಂದ ಮರಣ ಉತ್ತಾರೆವರೆಗೆ ಮತ್ತು ಸಬ್‌ರಜಿಸ್ಟರ್ ಆಫಿಸ್‌ಗೆ ಹೊದರೆ ದರ ಹೆಚ್ಚಳ ಛಾಪಾಖಾಗದದ ದರ ದುಪ್ಪಟ್ಟು ಮಾಡಿದ್ದಾರೆ ಪೇಟ್ರೋಲ್, ಡಿಸೇಲ್ ದರಕ್ಕೆ ತೆರಿಗೆ ಹಾಕಿದ್ದಾರೆ ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸುವಂತಹ ಕೆಲಸ ರಾಜ್ಯದ ಕಾಂಗ್ರೇಸ್ ಸರ್ಕಾರದ ಮಾಡಿದೆ ಎಂದು ಆರೋಪಿಸಿದ ಅವರು ಕೂಡಲೇ ರಾಜ್ಯದ ಕಾಂಗ್ರೇಸ್ ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು ಬರ ನಿರ್ವಹಣೆಗೆ ಕೆಲಸಗಳನ್ನು ಪ್ರಾರಂಬಿಸುವಂತಹ ಕೆಲಸ ಮಾಡಲಿ ಎಂದು ಒತ್ತಾಯಿಸಿದ ಅವರು ಕೂಡಲೇ ಮುಖ್ಯಮಂತ್ರಿಗಳು ಈ ಕಾಂಗ್ರೇಸ್ ಸರ್ಕಾರದ ಕಳೆದ 3 ವರ್ಷದ ಆಡಳಿತದಲ್ಲಿ ಏಷ್ಟು ಸಾಲ ಮಾಡಲಾಗಿದೆ ಎಂಬುದನ್ನು ಶ್ವೇತ ಪತ್ರ ಹೊರಡಿಸಿ ರಾಜ್ಯದ ಜನರಿಗೆ ಉತ್ತರ ಕೊಡುವಂತಹ ಕೆಲಸ ಮಾಡಬೇಕೆಂದರು.

# ರೈತರ ಪಾಲಿಗೆ ಸರ್ಕಾರ ಸತ್ತು ಹೋಗಿದೆ: ಅಶೋಕ್ ಕಿಡಿ

**ಬಳ್ಳಾರಿ, ಜು. 30–** ರಾಜ್ಯದಲ್ಲಿ ಭೀಕರ ಬರಗಾಲ ಇದೆ. ಜನರು ಗುಳೇ ಹೋಗುತ್ತಿದ್ದಾರೆ. ಬೆಳೆಗಳು ಒಣಗುತ್ತಿವೆ. ಈವರೆಗೆ ಬರಗಾಲ ಘೋಷಣೆ ಮಾಡಿಲ್ಲ, ರೈತರ ಪಾಲಿಗೆ ಸರ್ಕಾರ ಸತ್ತು ಹೋಗಿದೆ ಎಂದು ರಾಜ್ಯದ ಪ್ರತಿಪಕ್ಷ ನಾಯಕ ಆರ್ ಅಶೋಕ ಕಿಡಿಕಾರಿದ್ದಾರೆ.

ಅವರು ಇಂದು ಬಳ್ಳಾರಿ ತಾಲೂಕಿನ ಸಿಡಗಿನಮೊಳೆ, ಕಾರೆಕಲ್ಲಿನ ಪಂಪನಗೌಡ ಗ್ರಾಮದಲ್ಲಿನ ರೈತರ ಮಳೆಯಾಶ್ರಿತ ಜಮೀನುಗಳಿಗೆ ತೆರಳಿ ಬಿತ್ತಿದ ತೊಗರಿ ಬೆಳೆಯನ್ನು ವೀಕ್ಷಿಸಿದರು. ರೈತರು ಒಣಗುತ್ತಿರುವ ಬೆಳೆಯನ್ನು ಕಿತ್ತು ತೋರಿಸಿ ತಕ್ಷಣ ಬರ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಬಳಿಕ ಮಾತನಾಡಿದ ಅಶೋಕ ಅವರು ಬೆಳೆ ಒಣಗುತ್ತಿದೆ. ಕುಡಿಯುವ ನೀರಿಗೆ ಹಾಹಾಕಾರ ಇದೆ.

ಬಿತ್ತನೆ ಮಾಡಿ 50 ದಿನ ಆಗಿದೆ, ರೈತರು ಜಮೀನಿನಕಡೆ ಬರದೆ ಸಂಕಷ್ಟದಲ್ಲಿದ್ದಾರೆ ರಾಜ್ಯ ಸರ್ಕಾರ ಈ ವೇಳೆಗೆ ಪರಿಹಾರ ಘೋಷಣೆ ಮಾಡಬೇಕಿತ್ತು.

ಆದರೆ ಮುಖ್ಯ ಮಂತ್ರಿ ಡಿಕೆ ಶಿವಕುಮಾರ್ ಅವರು ದೆಹಲಿಯಲ್ಲಿ ಅಲೆಯುತ್ತಿದ್ದಾರೆ. ಒಂದು ಕಡೆ ಕಾವೇರಿ ನೀರಿನ ಆತಂಕ ಇದೆ. ಸಚಿವರು , ಡಿಸಿಯವರು ಬರ ಪರಿಶೀಲನೆಗೆ ಬಂದಿಲ್ಲ. ಶಾಸಕರಿಗೆ ಸಚಿವಸ್ಥಾನ ಬೇಕಿದೆ ಅವರಿಗೆ ರೈತರ ಸಂಕಷ್ಟ ಬೇಕಿಲ್ಲ. ರೈತರ ಪಾಲಿಗೆ ಸರ್ಕಾರ ಸತ್ತಿದೆಂದರು.

ಪರಿಶೀಲನಾ ತಂಡದ ಸದಸ್ಯರಾದ ಬೈರತಿ ಬಸವರಾಜ್ ಬಿ.ಪಿ.ಹರೀಶ್, ನವೀನ್, ಜನಾರ್ಧನರೆಡ್ಡಿ, ಮತ್ತು ಪಕ್ಷದ ಮುಖಂಡರಾದ ಮಾಜಿ ಸಂಸದ ಸಣ್ಣ ಪಕ್ಕೀರಪ್ಪ, ಎಸ್.ಗುರುಲಿಂಗನಗೌಡ, ಗುತ್ತಿಗನೂರು ವಿರೂಪಾಕ್ಷಗೌಡ, ಅನಿಲ್ ನಾಯ್ಡು, ಜಿ.ಟಿ.ಪಂಪಾಪತಿ ಮೊದಲಾದವರು ಇದ್ದರು.



# ಜಿಲ್ಲಾಡಳಿತದಿಂದ ಆಗಸ್ಟ್ 4ರಂದು ಶಿವಶರಣ ಹಡಪದ ಅಪ್ಪಣ್ಣ ಜಯಂತಿ

ಧೈರ್ಯದ ದಾರಿ



**ರಾಯಚೂರು ಜುಲೈ 30:** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಆಗಸ್ಟ್ 4 ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ಇರಕಲ್ ಮಠದ ಶಿವಶಕ್ತಿ ಪೀಠದ ಶ್ರೀ ಶ್ರೀ ಬಸವಪ್ರಸಾದ ಅವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್ ಅವರು ಘನ ಉಪಸ್ಥಿತಿ ವಹಿಸುವರು. ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎನ್.ಎಸ್.ಬೋಸರಾಜು, ಎ.ವಸಂತಕುಮಾರ, ಬಸನಗೌಡ ಬಾದರ್ಲಿ,

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಹಣಕಾಸು ನಿಗಮ ಬೆಂಗಳೂರಿನ ವ್ಯವಸ್ಥಾಪಕರು( ಹೆ.ಪ್ರ) ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಎಸ್.ನಕುಲ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ.

ನಿವೃತ್ತ ಉಪನ್ಯಾಸಕರಾದ ವೆಂಕಟೇಶ ನವಲಕಲ್ ಅವರು ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಟ್ಯಶ್ರೀ ನೃತ್ಯಾಲಯದಲ್ಲಿ ಗುರು ಪೂರ್ಣಿಮೆ ಆಚರಣೆ



**ಬೀದರ್:** ನಗರದ ನಾಟ್ಯಶ್ರೀ ನೃತ್ಯಾಲಯದಲ್ಲಿ ಗುರು ಪೂರ್ಣಿಮೆಯನ್ನು ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನೃತ್ಯಾಲಯದ ವಿದ್ಯಾರ್ಥಿಗಳು ತಮಗೆ ಕಲೆ ಧಾರೆ ಎರೆದ ಖ್ಯಾತ ಭರತನಾಟ್ಯ ಕಲಾವಿದೆಯೂ ಆದ ನೃತ್ಯಾಲಯದ ಅಧ್ಯಕ್ಷೆ ರಾಣಿ ಸತ್ಯಮೂರ್ತಿ ಅವರನ್ನು ಶಾಲು ಹೊದಿಸಿ ಗೌರವಿಸಿದರು.

ಉಪನ್ಯಾಸಕಿ ಗೀತಾ ಗಡ್ಡಿ ಅವರು ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ಗುರು ಪೂರ್ಣಿಮೆ ಮಹತ್ವ ಮನ ಮುಟ್ಟುವಂತೆ ಹೇಳಿದರು.

ನೃತ್ಯಾಲಯದ ನಿರ್ದೇಶಕ ಕೆ. ಸತ್ಯಮೂರ್ತಿ, ದೇವಿದಾಸ ಜೋಶಿ ಮತ್ತಿತರರು ಇದ್ದರು.

# ಗುರು ಗುರುವಾಗಿ, ಶಿಷ್ಯ ಶಿಷ್ಯನಾಗಿಯೇ ಇರಬೇಕು: ಮುರುಘೇಶ

**ತಾಳಿಕೋಟೆ:ಜು.30:** ಗುರುವಿನ ಗುಲಾಮನಾಗಿರುವ ತನಕ ದೊರೆಯದಣ್ಣ ಮುಕುತಿ ಎಂಬಂತೆ ಗುವಾದವನು ಗುರುವಿನ ಸ್ಥಾನವಾನದಂತೆ ಶಿಷ್ಯ ಆದವನಿಗೆ ಬೋಧಿಸುವಂತಿರಬೇಕು ಶಿಷ್ಯನಾದವರು ಗುರುಬೋಧನೆಯನ್ನು ಅನುಸರಿಸುತ್ತಾ ಸಾಗಿದರೆ ಮೋಕ್ಷದ ಮಾರ್ಗವೆಂಬುದು ದೊರೆಯಲಿದೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಉಸ್ತುವರಿಯಾದ ವೇ॥ ಮುರುಘೇಶ ವಿರಕ್ತಮಠ ಅವರು ನುಡಿದರು.




ಬುಧವಾರರಂದು ಸ್ಥಳೀಯ ನಿಜಗುಣ ಶಿವಯೋಗಿಗಳ ಆನಂದಾಶ್ರಮದಲ್ಲಿ ಶಾಸ್ತ್ರ ಸಮೀತಿಯವರ ವತಿಯಿಂದ ಏರ್ಪಡಿಸಲಾದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದ ಅವರು ಶ್ರೀ ಖಾಸ್ಗತ ಶಿವಯೋಗಿಗಳು ಗುರುಗಳಾದ ಹುಬ್ಬಳ್ಳಿಯ ಸಿದ್ದಾರೂಢ ಶ್ರೀಗಳಿಂದ ಜ್ಞಾನಸಂಪತ್ತೆಂಬುದನ್ನು ಪಡೆದುಕೊಂಡರು ತಾಳಿಕೋಟೆ ಹಾಗೂ ಸುತ್ತಮುತ್ತಲಿನ ಭಕ್ತರ ಅಪೇಕ್ಷೆಯಂತೆ ಆಗಮಿಸಿ ಜನೋದ್ದಾರ ಹಾಗೂ ಭಕ್ತೋಧ್ದಾರಗೈದರಲ್ಲದೇ ಅವರಲ್ಲಿರತಕ್ಕಂತಹ ಗುರುಭಕ್ತಿ ದೇವನ ಒಲುಮೆಗೆ ಪಾತ್ರವಾಗಿತ್ತೆಂದರು. ಶ್ರೀಮಠದ ಶಿವಬಸವ ದೇವರು ಹಾಗೂ ತುಮಕೂರಿನ ಶ್ರೀ ಸಿದ್ದಗಂಗಾಶ್ರೀಗಳು ಈ ಹಿಂದೆ ಖಾಶಿಯಲ್ಲಿ ಶಿಕ್ಷಣ ಪಡೆದು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದರ ಕುರಿತು ಶ್ರೀ ಮಠದ ಭಕ್ತರ ಸಂಖ್ಯೆ ಇಂದಿನ ದಿನಮಾನದಲ್ಲಿ ಹೆಚ್ಚುತ್ತಿರುವ ಹಾಗೂ ವಿರಕ್ತಶ್ರೀಗಳ ಹಾಗೂ ಸಿದ್ದಲಿಂಗದೇವರ ಪ್ರಭಾವ ಹೆಚ್ಚುತ್ತಿರುವ ಕುರಿತು ಶಾಸ್ತ್ರ ಭಕ್ತರ ಮುಂದೆ ವಿವರಿಸಿದರು.

ಇನ್ನೋರ್ವ ಮುಖ್ಯ ಅತಿಥಿ ಸ್ಥಾನ ಅಲಂಕರಿಸಿ ಉಪನ್ಯಾಸಕರಾದ ಪರಶುರಾಮ ಚೌಕೇರ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ ಆದ್ಯಾತ್ಮದ ಗುರುವಾಗಿದ್ದ ವ್ಯಾಸ ಮಹಾಋಷಿಗಳನ್ನು ನೆನಪಿಸುವಂತಹ ದಿನವೇ ಗುರುಪೂರ್ಣಿಮೆಯಾಗಿದೆ ಗುರುವಿನ ಕೃಪಾಬಿತ್ತಿಯೆಂಬುದು ಎಲ್ಲರ ಮೇಲೆ ಹರಿಯಬೇಕೆಂಬುದೇ ಕಾರ್ಯಕ್ರಮದ ಉದ್ದೇಶವಾಗಿದೆ ಪರತತ್ವ ವಿದ್ಯೆಯನ್ನು ಹೇಳುವಂತಹ ಗುರು ಮದನೆನ್ನುವದು ಇರಬಾರದು ಅದಕ್ಕೆ ವರಪುಣ್ಯಮಯವೆಂದು ಕರೆದಿದ್ದಾರೆ ವರಪಾಪಮಯವಾದಂತಹ ಕಾರ್ಯ ಮಾಡಬಾರದೆಂದರು. ತಾಳಿಕೋಟೆ ಖಾಸ್ಗತ ಮಠದ ಸಿದ್ದಲಿಂಗದೇವರು ವರಪುಣ್ಯಮಯ ಶರೀರದವರಾಗಿದ್ದು ಯಾವ ಅಪೇಕ್ಷೆಯಿಲ್ಲದೇ ಶ್ರೀ ಸಿದ್ದೇಶ್ವರ ಶ್ರೀಗಳಂತೆ ಮುನ್ನಡೆದಿದ್ದಾರೆಂದು ಯಡಿಯೂರ ಬಸವಲಿಂಗಶ್ರೀಗಳು ಬರೆದಂತಹ ತತ್ವ ಪದಗಳನ್ನು ಹಾಡಿ ಅರ್ಥೈಯಿಸಿದರಲ್ಲದೇ ಸಜ್ಜಲಗುಡ್ಡ ಶರಣಮ್ಮತಾಯಿಯ ಕೆಲವು ಪವಾಡಗಳನ್ನು ಹೇಳಿ ಸಮಾಜದಲ್ಲಿ ಹುಟ್ಟಿ ಜಗತ್ತನ್ನೇ ಬೆಳಗುವಂತೆ ಶರಣಮ್ಮನವರು ಮಾಡಿದ್ದಾರೆಂದ ಅವರು ಶರಣಮ್ಮನವರು ದಿನಕ್ಕೆ 16 ಸಾವಿರಕ್ಕೂ ಹೆಚ್ಚು ಶಿವಮಂತ್ರವನ್ನು ಪಠಿಸುತ್ತಿದ್ದರು ಅವರಿಗೆ ದೇವರ ಒಲುಮೆಯಾಗಿತ್ತು ಅವರು ಅಂದದ್ದೇ ದೇವಭಾಷೆಯಾಗಿ ಪರಿಣಮಿಸುತ್ತಿತ್ತೆಂದರು.

ನಿಜಗುಣ ಶಿವಯೋಗಿಗಳ ಆನಂದಾಶ್ರಮದ ಅಧ್ಯಕ್ಷರಾದ ಎಸ್.ಎಂ. ಬೇನಾಳಮಠ ಅವರು ಮಾತನಾಡಿ ಗುರುವಿಗೆ ಕೊಟ್ಟಂತಹ ಮಾತನ್ನು ಪಾಲಿಸಿದಂತಹ ಭಕ್ತರ ಕುರಿತು ಶಿವಲಿಂಗ ಶ್ರೀಗಳ ಕುರಿತು ತಿಳಿಹೇಳುತ್ತಾ ಗುರುಶಕ್ತಿಯೆಂಬುದು ದೊಡ್ಡದಾಗಿರುತ್ತದೆ ಗುರು ಮೋಕ್ಷವನ್ನು ಕೊಡುತ್ತಾನೆ ಭಕ್ತಿ ಜ್ಞಾನ ಶಕ್ತಿ ಪಡೆಯಬೇಕಾದರೆ ಮೋಕ್ಷದ ದಾರಿಗೆ ಹೋಗಬೇಕಾದರೆ ಶಾಸ್ತ್ರ ಪ್ರವಚನವನ್ನು ಆಲಿಸಿ ಪಾಲಿಸಬೇಕಾಗುತ್ತದೆ ಎಂದರು.

ಶಾಸ್ತ್ರ ಪ್ರವಚನದ ಶ್ರೀಮತಿ ಶಕುಂತಲಾ ಹಿರೇಮಠ, ಶ್ರೀಮತಿ ಉಮಾ ಫಿವಾರಿ, ಹೇಮಾ ದುರ್ಗದಮಠ, ಶ್ರೀಮತಿ ಡಾ. ಅರಮನಿ ಅಕ್ಕನವರು, ಶ್ರೀಮತಿ ಕ್ವಾಟಿ ಅವರು ಮಾತನಾಡಿದರು.

ಸಾನಿಧ್ಯವಹಿಸಿದ ಕೋರವಾರ ಚೌಕೀಮಠದ ಶ್ರೀಗಳು ಆಶೀರ್ವಚನವಿತ್ತರು.

ಶ್ರೀಮತಿ ಲೋಕರೆ, ಕ್ವಾಟಿ ಸಂಗೀತ ಸೇವೆ ಸಲ್ಲಿಸಿದರು. ಶಿಕ್ಷಕ ಮಲ್ಲಿಕಾರ್ಜುನ ಹಿಪ್ಪರಗಿ ಸ್ವಾಗತಿಸಿ ನಿರೂಪಿಸಿ ವಂದಿಸಿದರು.

ಮಹಾಪ್ರಸಾದದೊಂದಿಗೆ ಕಾರ್ಯಕ್ರಮ ಮಂಗಲಗೊಂಡಿತು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE